# ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು:

**ಅಧ್ಯಾಯ - I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ - II**

**ಅಧಿವೇಶನಗಳನ್ನು ನಡೆಸುವುದು**

3. ಅಧಿವೇಶನಗಳ ಅವಧಿ
4. ವಿಧಾನಮಂಡಲದ ಉಪವೇಶನಗಳು
5. ವಿಶೇಷ ಅಧಿವೇಶನವನ್ನು ಕರೆಯುವುದು

**ಅಧ್ಯಾಯ - III**

**ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿಯ ರಚನೆ ಮತ್ತು ಅದರ ಪ್ರಕಾರ್ಯಗಳು**

6. ಸಮಿತಿಯ ರಚನೆ
7. ಸಮಿತಿಯ ಪ್ರಕಾರ್ಯಗಳು

**ಅಧ್ಯಾಯ - IV**

**ಸಂಕೀರ್ಣ ವಿಷಯಗಳು**

8. ಇತರೆ ಕಾನೂನುಗಳ ಅನ್ವಯಕ್ಕೆ ಪ್ರತಿಬಂಧವಿಲ್ಲ
9. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
10. ನಿಯಮಗಳ ರಚನಾಧಿಕಾರ
11. ತೊಂದರೆಗಳ ನಿವಾರಣೆ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005ರ ಅಧಿನಿಯಮ ಸಂಖ್ಯೆ 26:– ರಾಜ್ಯ ವಿಧಾನಮಂಡಲದಲ್ಲಿ ಒಂದು ವರ್ಷದಲ್ಲಿ ಅರವತ್ತು ದಿನಗಳಿಗಿಂತ ಕಡಿಮೆ ಇಲ್ಲದಂತೆ ಸರ್ಕಾರದ ಕಾರ್ಯಕಲಾಪಗಳು ನಡೆಯುವಂತೆ ಉಪಬಂಧ ಕಲ್ಪಿಸುವುದು ಮತ್ತು ಸಾಮಾನ್ಯವಾಗಿ ಈ ಮುಂದಿನ ರೀತಿಯಲ್ಲಿ ರಾಜ್ಯವಿಧಾನ ಮಂಡಲವನ್ನು ಕರೆಯುವುದಕ್ಕಾಗಿ ಶಿಫಾರಸ್ಸು ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:–

(ಎ) ಪ್ರಾರಂಭಿಕ ಅಧಿವೇಶನ:– ಜನವರಿ ಎರಡನೇ ವಾರದಲ್ಲಿ ರಾಜ್ಯಪಾಲರ ಭಾಷಣದೊಂದಿಗೆ ಪ್ರಾರಂಭಿಸಿ ಕನಿಷ್ಠ ಹದಿನೈದು ದಿನಗಳ ಅವಧಿಯ ವರೆಗೆ ನಡೆಸುವುದು.

(ಬಿ) ಬಜೆಟ್ ಅಧಿವೇಶನ:– ಮಾರ್ಚ್ ಮೊದಲನೇ ವಾರದಲ್ಲಿ ಪ್ರಾರಂಭಿಸಿ ಕನಿಷ್ಠ ಇಪ್ಪತ್ತು ದಿನಗಳ ಅವಧಿಯವರೆಗೆ ನಡೆಸುವುದು.

(ಸಿ) ಮಳೆಗಾಲದ ಅಧಿವೇಶನ:– ಜುಲೈ ಎರಡನೇ ವಾರದಲ್ಲಿ ಪ್ರಾರಂಭಿಸಿ ಕನಿಷ್ಠ ಹದಿನೈದು ದಿನಗಳ ಅವಧಿಯವರೆಗೆ ನಡೆಸುವುದು.

(ಡಿ) ಚಳಿಗಾಲದ ಅಧಿವೇಶನ:– ನವೆಂಬರ್ ಎರಡನೇ ವಾರದಲ್ಲಿ ಪ್ರಾರಂಭಿಸಿ ಕನಿಷ್ಠ ಹತ್ತು ದಿನಗಳ ಅವಧಿಯವರೆಗೆ ನಡೆಸುವುದು.

ಅಲ್ಲದೇ, ವಿಧಾನ ಮಂಡಲದ ಯಾವುದೇ ಸದನದ ಕಲಾಪಗಳ ಸಲಹಾ ಸಮಿತಿಗೆ ಮಂಡಿಸಬೇಕಾದ ಸರ್ಕಾರದ ಕಾರ್ಯಕಲಾಪಗಳನ್ನು ನಿರ್ಧರಿಸುವ ಅವುಗಳ ಆದ್ಯತೆಗಳನ್ನು ಸೂಚಿಸುವ ಸಲುವಾಗಿ ಒಂದು ಸರ್ಕಾರಿ ಕಾರ್ಯಕಲಾಪ ಸಲಹಾ ಸಮಿತಿಯನ್ನು ರಚಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ ಸಹ ಉಪಬಂಧವನ್ನು ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 14]

## 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26

(2005ರ ಆಗಸ್ಟ್ ಇಪ್ಪತ್ತನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005

(2005ರ ಆಗಸ್ಟ್ ಇಪ್ಪತ್ತೆರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯ ವಿಧಾನಮಂಡಲದಲ್ಲಿ ನಿರ್ದಿಷ್ಟಪಡಿಸಿದಷ್ಟು ಕನಿಷ್ಠ ದಿನಗಳಾದರೂ ಸರ್ಕಾರಿ ಕಾರ್ಯಕಲಾಪಗಳು ನಡೆಯುವಂತೆ ಉಪಬಂಧಿಸುವ ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ;

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ರಾಜ್ಯ ವಿಧಾನಮಂಡಲದಲ್ಲಿ ನಿರ್ದಿಷ್ಟಪಡಿಸಿದಷ್ಟು ಕನಿಷ್ಠ ದಿನಗಳಾದರೂ ಸರ್ಕಾರಿ ಕಾರ್ಯಕಲಾಪಗಳು ನಡೆಯುವಂತೆ ಉಪಬಂಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

### ಅಧ್ಯಾಯ - I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ, ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ 1[ದಿನಾಂಕ]1ದಿಂದ ಜಾರಿಗೆ ಬರತಕ್ಕದ್ದು.

1. ದಿನಾಂಕ: 15.10.2005 ರಿಂದ ಅಧಿನಿಯಮವನ್ನು ಜಾರಿಗೆ ತರಲಾಗಿದೆ.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧ್ಯಕ್ಷರು" ಎಂದರೆ ಸಮಿತಿಯ ಅಧ್ಯಕ್ಷರು;

(ಬಿ) "ಸಮಿತಿ" ಎಂದರೆ 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿ;

(ಸಿ) "ಕಾರ್ಯಕಲಾಪಗಳ ನಿರ್ವಹಣೆ ನಿಯಮಗಳು" ಎಂದರೆ ಸಂವಿಧಾನದ 208ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯ ವಿಧಾನ ಮಂಡಲದ ಯಾವುದೊಂದು ಸದನದ ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿರ್ವಹಣೆ ನಿಯಮಗಳು;

(ಡಿ) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ಇ) "ಸದನ" ಎಂದರೆ ಯಾವುದೇ ಉಪಬಂಧದಲ್ಲಿ ಕರ್ನಾಟಕ ವಿಧಾನಸಭೆ ಅಥವಾ ಕರ್ನಾಟಕ ವಿಧಾನಪರಿಷತ್ತು ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಿದ ಹೊರತು ರಾಜ್ಯ ವಿಧಾನಮಂಡಲದ ಯಾವುದೊಂದು ಸದನ;

(ಎಫ್) "ವಿಧಾನಮಂಡಲ" ಅಥವಾ "ರಾಜ್ಯ ವಿಧಾನಮಂಡಲ" ಎಂದರೆ, ಕರ್ನಾಟಕ ರಾಜ್ಯವಿಧಾನ ಮಂಡಲ;

(ಜಿ) "ಅಧಿವೇಶನಗಳು" ಎಂದರೆ ವಿಧಾನಮಂಡಲದ ಪ್ರತಿಯೊಂದು ಸದನದ ಅಧಿವೇಶನಗಳು;

(ಹೆಚ್) "ವರ್ಷ" ಎಂದರೆ, ಜನವರಿ ಒಂದನೇ ದಿನಾಂಕದಿಂದ ಪ್ರಾರಂಭವಾಗುವ ಕ್ಯಾಲೆಂಡರ್ ವರ್ಷ.

(2) ಈ ಅಧಿನಿಯಮದಲ್ಲಿ ಸಂವಿಧಾನಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು, ಭಾರತ ಸಂವಿಧಾನಕ್ಕೆ ಮಾಡಲಾದ ಉಲ್ಲೇಖವೆಂದು ಓದಿಕೊಳ್ಳತಕ್ಕದ್ದು.

## ಅಧ್ಯಾಯ - II

## ಅಧಿವೇಶನಗಳನ್ನು ನಡೆಸುವುದು

**3. ಅಧಿವೇಶನಗಳ ಅವಧಿ.–** ರಾಜ್ಯವಿಧಾನ ಮಂಡಲವನ್ನು ಕರೆಯುವುದಕ್ಕೆ ಮತ್ತು ಜಂಟಿ ಉಪವೇಶನಗಳ ಅವಧಿಯೂ ಒಳಗೊಂಡಂತೆ ವಿಧಾನಮಂಡಲದ ಅಧಿವೇಶನಗಳನ್ನು ಅರವತ್ತು ದಿನಗಳಿಗೆ ಕಡಿಮೆಯಲ್ಲದಂತೆ ನಡೆಸುವುದಕ್ಕೆ ಶಿಫಾರಸ್ಸು ಮಾಡುವುದು ಸರ್ಕಾರದ ಹೊಣೆಗಾರಿಕೆಯಾಗಿರತಕ್ಕದ್ದು.

**4. ವಿಧಾನಮಂಡಲದ ಉಪವೇಶನಗಳು.–** ಪ್ರತಿಯೊಂದು ವರ್ಷದಲ್ಲಿ ವಿಧಾನಮಂಡಲದ ಉಪವೇಶನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನಾಲ್ಕು ಅಧಿವೇಶನಗಳಾಗಿ ವಿಭಾಗಿಸಬಹುದು ಎಂದರೆ:–

(ಎ) ಪ್ರಾರಂಭಿಕ ಅಧಿವೇಶನ.– ಸಾಮಾನ್ಯವಾಗಿ ಜನವರಿ ಎರಡನೇ ವಾರದಲ್ಲಿ ರಾಜ್ಯಪಾಲರ ಭಾಷಣದೊಡನೆ ಪ್ರಾರಂಭವಾಗಿ ಕನಿಷ್ಠ ಹದಿನೈದು ದಿನಗಳ ಅವಧಿಯವರೆಗೆ ನಡೆಯುವುದು;

(ಬಿ) ಬಜೆಟ್ ಅಧಿವೇಶನ.– ಸಾಮಾನ್ಯವಾಗಿ ಮಾರ್ಚ್ ಮೊದಲನೇ ವಾರದಿಂದ ಪ್ರಾರಂಭವಾಗಿ ಕನಿಷ್ಠ ಇಪ್ಪತ್ತು ದಿನಗಳ ಅವಧಿಯವರೆಗೆ ನಡೆಯುವುದು;

(ಸಿ) ಮಳೆಗಾಲದ ಅಧಿವೇಶನ.– ಸಾಮಾನ್ಯವಾಗಿ ಜುಲೈ ಎರಡನೇ ವಾರದಿಂದ ಪ್ರಾರಂಭವಾಗಿ ಕನಿಷ್ಠ ಹದಿನೈದು ದಿನಗಳ ಅವಧಿಯವರೆಗೆ ನಡೆಯುವುದು;

(ಡಿ) ಚಳಿಗಾಲದ ಅಧಿವೇಶನ.– ಸಾಮಾನ್ಯವಾಗಿ ನವೆಂಬರ್ ಎರಡನೇ ವಾರದಿಂದ ಪ್ರಾರಂಭವಾಗಿ ಕನಿಷ್ಠ ಹತ್ತು ದಿನಗಳವರೆಗೆ ನಡೆಯುವುದು;

ಪರಂತು, ರಾಜ್ಯ ಸರ್ಕಾರವು ಸಮಿತಿಯ ಸಲಹೆಯ ಮೇರೆಗೆ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರಸ್ಸು ಮಾಡಬಹುದು:

ಮತ್ತು ಪರಂತು, ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಪೂರ್ಣ ಅಧಿವೇಶನವನ್ನು ನಡೆಸಲು ಸಾಕಾಗುವಷ್ಟು ಸರ್ಕಾರಿ ಕಾರ್ಯಕಲಾಪಗಳು ಇಲ್ಲದಿದ್ದರೆ ಸದನವನ್ನು ಮುಂದೂಡಬಹುದು ಮತ್ತು ಒಂದು ಅಧಿವೇಶನದ ಕನಿಷ್ಠ ಸಂಖ್ಯೆಯ ದಿನಗಳಿಗಿಂತಲೂ ಕಡಿಮೆ ಬಿದ್ದ ದಿನಗಳನ್ನು, ಅದೇ ವರ್ಷದಲ್ಲಿಯ ತರುವಾಯದ ಅಧಿವೇಶನಗಳಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಸರಿದೂಗಿಸಿಕೊಳ್ಳತಕ್ಕದ್ದು.

**5. ವಿಶೇಷ ಅಧಿವೇಶನವನ್ನು ಕರೆಯುವುದು.–** ಮೇಲೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ ವಿಶೇಷ ಸ್ವರೂಪದ ಯಾವುದೇ ವಿಷಯವನ್ನು ಚರ್ಚಿಸುವುದಕ್ಕಾಗಿ ವಿಧಾನಮಂಡಲದ ಸದನಗಳ ಅಧಿವೇಶನವನ್ನು ಕರೆಯಬೇಕೆಂದು ಸರ್ಕಾರವು ಭಾವಿಸಿದಲ್ಲಿ, ಸಮಿತಿಯು ಅದಕ್ಕನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆ ವಿಶೇಷ ಅಧಿವೇಶನವನ್ನು ನಡೆಸುವುದಕ್ಕಾಗಿ ಅಗತ್ಯವಾದ ದಿನಗಳ ಸಂಖ್ಯೆಯನ್ನು ರಾಜ್ಯ ವಿಧಾನಮಂಡಲಕ್ಕೆ ಶಿಫಾರಸ್ಸು ಮಾಡತಕ್ಕದ್ದು.

## ಅಧ್ಯಾಯ - III

## ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿಯ ರಚನೆ ಮತ್ತು ಅದರ ಪ್ರಕಾರ್ಯಗಳು

**6. ಸಮಿತಿಯ ರಚನೆ.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ಸರ್ಕಾರವು, ವಿಧಾನಮಂಡಲದ ಪ್ರತಿಯೊಂದು ಅಧಿವೇಶನದಲ್ಲಿ ನಡೆಸಬೇಕಾದ ಸರ್ಕಾರಿ ಕಾರ್ಯಕಲಾಪಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದಕ್ಕಾಗಿ ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿ ಎಂಬ ಹೆಸರಿನ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಸಮಿತಿಯಲ್ಲಿ ಈ ಮುಂದಿನವರು ಇರತಕ್ಕದ್ದು ಅಂದರೆ,

| | |
|---|---|
| (1) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸಚಿವರು | ಅಧ್ಯಕ್ಷರು |
| (2) ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು) | ಸದಸ್ಯರು |

| | |
|---|---|
| (3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಜೆಟ್ ಮತ್ತು ಸಂಪನ್ಮೂಲಗಳು) | ಸದಸ್ಯರು |
| (4) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ | ಸದಸ್ಯರು |
| (5) ಸರ್ಕಾರದ ಕಾರ್ಯದರ್ಶಿ, ಸಂವ್ಯಶಾಇ, ಇವರು ನಾಮ ನಿರ್ದೇಶನ ಮಾಡಿದ ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಒಬ್ಬ ಅಧಿಕಾರಿ | ಕಾರ್ಯದರ್ಶಿ |

**7. ಸಮಿತಿಯ ಪ್ರಕಾರ್ಯಗಳು.–** (1) ಸಮಿತಿಯು, ಕಾಲಕಾಲಕ್ಕೆ ಸರ್ಕಾರದ ಹಣಕಾಸು, ಶಾಸನರಚನೆ ಮತ್ತು ಇತರ ಪ್ರಸ್ತಾವಗಳನ್ನು ಸಂಗ್ರಹಿಸತಕ್ಕದ್ದು ಮತ್ತು ಎಲ್ಲಾ ಪ್ರಸ್ತಾವಗಳ ಒಂದು ಕ್ರೂಢೀಕೃತ ಪಟ್ಟಿಯನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದ್ದು. ಅಧ್ಯಕ್ಷರು ಯಾವುದೊಂದು ಸದನದ ಕಾರ್ಯಕಲಾಪಗಳ ಸಮಿತಿಯ ಸಭೆಯಲ್ಲಿ ಪ್ರತಿಯೊಂದು ಅಧಿವೇಶನಕ್ಕೆ ಹೊಂದುವಂತೆ ಆದ್ಯತೆಗಳನ್ನು, ಚರ್ಚೆಗೆ ಅಗತ್ಯವಾಗಬಹುದಾದ ಕಾಲಾವಕಾಶವನ್ನು ಮತ್ತು ಅಧಿವೇಶನದ ಸಮಯವನ್ನು ಅತ್ಯಂತ ಉಪಯುಕ್ತವಾಗಿ ಬಳಸಿಕೊಳ್ಳಲು ಸಾಧ್ಯವಾಗುವಂತೆ ಪ್ರಸ್ತಾವಗಳನ್ನು ಯಾವ ಸದನದಲ್ಲಿ ಮಂಡಿಸಬೇಕೆಂಬ ಬಗ್ಗೆ ಸಲಹೆಗಳನ್ನು ಸೂಚಿಸಿ ಪ್ರಸ್ತಾವಗಳನ್ನು ಮಂಡಿಸತಕ್ಕದ್ದು.

(2) ಸಮಿತಿಯು, ಸಭೆ ಸೇರಿ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಲಾಪಗಳನ್ನು ನಡೆಸುವುದಕ್ಕಾಗಿ ಅಗತ್ಯವಾದ ದಿನಗಳ ಸಂಖ್ಯೆಯನ್ನು ನಿರ್ಧರಿಸತಕ್ಕದ್ದು ಮತ್ತು ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರಸ್ಸು ಮಾಡಬಹುದು.

(3) ಸಮಿತಿಯು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅವಶ್ಯಕತೆಗಳ ಸಮನ್ವಯ ಮಾಡತಕ್ಕದ್ದು ಮತ್ತು ಎಲ್ಲ ಆಡಳಿತ ಇಲಾಖೆಗಳ ಅಗತ್ಯಗಳನ್ನು ಪರಿಗಣಿಸಿ ರಾಜ್ಯ ವಿಧಾನಮಂಡಲದ ಯಾವುದೊಂದು ಸದನದಲ್ಲಿ ಸರ್ಕಾರದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಅವಕಾಶ ಮಾಡಿಕೊಡಲು ವಿಧಾನ ಸಭೆಯ ಸಭಾಧ್ಯಕ್ಷರಿಗೆ ಮತ್ತು ವಿಧಾನಪರಿಷತ್ತಿನ ಸಭಾಪತಿಯವರಿಗೆ ಶಿಫಾರಸ್ಸು ಮಾಡುವುದು.

(4) ಸಮಿತಿಯು ತನ್ನ ಕಾರ್ಯಕಲಾಪಗಳನ್ನು ನಡೆಸಲು ಅವಶ್ಯಕವೆಂದು ಭಾವಿಸಬಹುದಾದಂಥ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು.

(5) ಅಧ್ಯಕ್ಷರ ಹೊರತಾಗಿ ಸಮಿತಿಯ ಯಾವೊಬ್ಬ ಸದಸ್ಯನ ಗೈರುಹಾಜರಿಯು, ಸಮಿತಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.

## ಅಧ್ಯಾಯ - IV

### ಸಂಕೀರ್ಣ ವಿಷಯಗಳು

**8. ಇತರೆ ಕಾನೂನುಗಳ ಅನ್ವಯಕ್ಕೆ ಪ್ರತಿಬಂಧವಿಲ್ಲ.–** (1) ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದೇ ಹೊರತು ಅವುಗಳನ್ನು ನ್ಯೂನಗೊಳಿಸತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿ ಇರುವುದಾವುದೂ, ಸಂವಿಧಾನದ 174, 175 ಮತ್ತು 176ನೇ ಅನುಚ್ಛೇದಗಳ ಉಪಬಂಧಗಳನ್ನು ನ್ಯೂನಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

**9. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರಡಿ ರಚಿಸಿದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**10. ನಿಯಮಗಳ ರಚನಾಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅಥವಾ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ತದನಂತರ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**11. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ ತೊಂದರೆಯ ನಿವಾರಣೆಗಾಗಿ, ಸರ್ಕಾರಿ

ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ತಾನು ಸೂಕ್ತವೆಂದು ಅಭಿಪ್ರಾಯಪಡುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ದಕ್ಷಿಣಾಮೂರ್ತಿ

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ-I**

**ಸಂಖ್ಯೆ: ಸಂವ್ಯಶಾಇ 63 ಶಾಸನ 2005, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್ 2005**
**ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ಸಂಖ್ಯೆ 1864, ದಿನಾಂಕ: 15.10.2005**

ಕರ್ನಾಟಕ ರಾಜ್ಯ ವಿಧಾನಮ0ಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 2005ರ ಅಕ್ಟೋಬರ್ 15ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಯಲ್ಲಿ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ

ಸರ್ಕಾರದ ಕಾರ್ಯದರ್ಶಿ (ಪ್ರಭಾರ),

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಸತ್ಯಮೇವ ಜಯತೆ

## ಅಧಿಸೂಚನೆ-II

**ಸಂಖ್ಯೆ: ಸಂವ್ಯಶಾಇ 63 ಶಾಸನ 2005, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್ 2005**
**ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ಸಂಖ್ಯೆ 1864, ದಿನಾಂಕ: 15.10.2005**

ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26)ರ 6ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗೆ ನಮೂದಿಸಿರುವಂತೆ ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಿದೆ.

| | | |
|---|---|---|
| (1) | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸಚಿವರು | ಅಧ್ಯಕ್ಷರು |
| (2) | ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು.) | ಸದಸ್ಯರು |
| (3) | ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಜೆಟ್ ಮತ್ತು ಸಂಪನ್ಮೂಲಗಳು) | ಸದಸ್ಯರು |
| (4) | ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ | ಸದಸ್ಯರು |
| (5) | ಕರ್ನಾಟಕ ವಿಧಾನಮಂಡಲದ ಅಧಿವೇಶನ ಕರೆಯುವ ಮತ್ತು ಸಮಾಪನಗೊಳಿಸುವ ವಿಷಯದ ಕಾರ್ಯಹಂಚಿಕೆಗೆ ಸಂಬಂಧಪಟ್ಟ ಸರ್ಕಾರದ ಸಹ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ | ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ

ಸರ್ಕಾರದ ಕಾರ್ಯದರ್ಶಿ (ಪ್ರಭಾರ),
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

सत्यमेव जयते

## KARNATAKA ACT NO. 26 OF 2005

## THE KARNATAKA CONDUCT OF GOVERNMENT BUSINESS IN THE STATE LEGISLATURE ACT, 2005

Arrangement of Sections

Sections:


**Chapter - I**

**Preliminary**

1. Short title and commencement
2. Definitions

**Chapter - II**

**Holding of Sessions**

3. Duration of Sessions
4. Sittings of Legislature
5. Convening of special session

**Chapter - III**

**Constitution and functions of the Government Business Advisory Committee**

6. Constitution of the Committee
7. Functions of the Committee

**Chapter - IV**

**Miscellaneous**

8. Application of other laws not barred
9. Protection of action taken in good faith
10. Power to make rules
11. Power to remove difficulties


* * * *

## STATEMENT OF OBJECTS AND REASONS

It is considered necessary to provide for, conduct of Government Business in the State Legislature Session for not less than sixty days in a year and to recommend for holding sessions ordinarily in the following manner, namely:-

(a) Opening Session – to begin with the Governor's Address, in the second week of January and to be held for a minimum period of fifteen days.

(b) Budget Session – to begin in the first week of March and to be held for a minimum period of twenty days.

(c) Monsoon Session – to begin in the second week of July and to be held for a minimum period of fifteen days.

(d) Winter Session – to begin in the second week of November and to be held for a minimum period of ten days.

Further, provision is also made to constitute a Government Business Advisory Committee to assess the Government Business to be presented in the Business Advisory Committee of the either House of the State Legislature indicating the priorities and matters connected therewith or incidental thereto.

Hence, the Bill.

[L.A. Bill No. 14 of 2005]

* * * *

## KARNATAKA ACT NO. 26 OF 2005

*(First published in the Karnataka Gazette Extraordinary on the twenty fourth Day of August, 2005)*

## THE KARNATAKA CONDUCT OF GOVERNMENT BUSINESS IN THE STATE LEGISLATURE ACT, 2005

*(Received the assent of the Governor on the twenty second Day of August, 2005)*

**An Act to provide for a certain minimum number of days of conduct of Government business in the State Legislature and matters connected therewith or incidental thereto;**

Whereas it is expedient to provide for a certain minimum number of days of conduct of Government Business in the State Legislature and matters connected therewith or incidental thereto and for the purposes hereinafter appearing;

Be it enacted by the State Legislature in the fifty-sixth year of Republic of India as follows:-

### Chapter - I

### Preliminary

**1. Short title and commencement.-** (1) This Act may be called the Karnataka Conduct of Government Business in the State Legislature Act, 2005.

(2) It shall come into force from such 1[date]1 as the State Government may by notification appoint.

1. The Act has come into force w.e.f. 15.10.2005 by Notification

**2. Definitions.-** (1) In this Act, unless the context otherwise requires,-

(a) "Chairman" means the Chairman of the Committee;

(b) "Committee" means the Government Business Advisory Committee constituted under section 6;

(c) "Conduct of Business Rules" means the Rules of Procedure and Conduct of Business of either House of the State Legislature under Article 208 of the Constitution;

(d) "Government" means the Government of Karnataka;

(e) "House" means unless specific reference is made to the Karnataka Legislative Assembly or the Karnataka Legislative Council in any provision, either House of the State Legislature;

(f) "Legislature" or "State Legislature" means the Karnataka State Legislature;

(g) "Sessions" means the sessions of each House of Legislature;

(h) "Year" means the Calendar Year commencing from the first day of January.

(2) Any reference to the Constitution made in this Act shall be read as reference to the Constitution of India.

## Chapter - II
## Holding of Sessions

**3. Duration of Sessions.-** It shall be obligatory on the part of the Government to recommend summoning of the State Legislature and for conduct of sessions of Legislature for not less than sixty days in a year, including the duration of joint sittings.

**4. Sittings of Legislature.-** The sittings of the Legislature in each year shall, as far as may be, divided into four sessions, namely:-

(a) Opening Session – to begin with the Governor's Address, ordinarily in the second week of January and to be held for a minimum period of fifteen days.

(b) Budget Session – to begin ordinarily in the first week of March and to be held for a minimum period of twenty days.

(c) Monsoon Session – to begin ordinarily in the second week of July and to be held for a minimum period of fifteen days.

(d) Winter Session – to begin ordinarily in the second week of November and to be held for a minimum period of ten days.

Provided that the State Government may on the advice of the Committee, recommend for enhancement or reduction of number of days of conduct of Government business in the State Legislature:

Provided further that if there is no sufficient Government Business to hold the session in full in the manner specified above, the House may be adjourned and the shortfall of minimum number of days in one session shall be made good partly or fully in the succeeding sessions in the same year.

**5. Convening of special session.-** Without prejudice to the foregoing provisions whenever the Government feels that a session of the Houses of Legislature has to be summoned to discuss any issue of special nature the Committee shall act upon it and recommend to the State Legislature the number of days required to be conducted for that special session.

## Chapter - III

## Constitution and functions of the Government Business Advisory Committee

**6. Constitution of the Committee.-** (1) As soon as may be after the commencement of this Act, the State Government shall constitute a committee to be called the Government Business Advisory Committee to advise the Government on the Government business to be transacted during each Legislature Session.

(2) The Committee shall consist of,-

| | | |
|---|---|---|
| (1) | The Minister incharge of Parliamentary Affairs and Legislation | Chairman |
| (2) | The Secretary to Govt., Dept. of Personnel and Administrative Reforms (AR) | Member |
| (3) | The Secretary to Govt., Finance Department (Budget and Resources) | Member |
| (4) | The Secretary to Govt.,Dept. of Parliamentary Affairs and Legislation | Member |
| (5) | An Officer of the Department of Parliamentary Affairs and Legislation not below the rank of an Assistant Draftsman and Ex-officio Deputy Secretary to Government, nominated by the Secretary to Government, Department of Parliamentary Affairs and Legislation. | Secretary |

**7. Functions of the Committee.-** (1) The Committee shall from time to time collect the Financial/ Legislative and other proposals of the Government and keep a consolidated list of all proposals. The Chairman shall present the proposals at the meetings of the Business Advisory Committee of either House indicating the priorities appropriate to each session, the probable time required for discussion and suggestions at introducing the proposals before either House, in a way to make the best utility of session time.

(2) The Committee shall meet and decide the number of days required for the conduct of Government business in the State Legislature and may recommend for the enhancement or reduction of number of days of conduct of Government business in the State Legislature.

(3) The Committee shall also co-ordinate the needs of the different departments of the State Government and taking into consideration the requirement of all the administrative departments recommend to the Speaker of the Legislative Assembly and the Chairman of the Legislative Council to provide for conduct of Government business in the respective Houses of the State Legislature.

(4) The Committee shall adopt such procedure as it deems fit for conducting its business.

(5) Absence of any member of the committee other than the Chairman shall not invalidate the proceedings of the committee.

## Chapter - IV
## Miscellaneous

**8. Application of other laws not barred.-** (1) The provisions of this Act shall be in addition to, and not in derogation of the provisions of any other law for the time being in force.

(2) Nothing contained in this section shall be construed as derogative of the provisions of Articles 174, 175 and 176 of the Constitution.

**9. Protection of action taken in good faith:-** No suit, prosecution or other legal proceedings shall lie against the State Government or any officer of the State Government for anything which is in good faith done or intended to be done under this Act or the rules made thereunder.

**10. Power to make rules.-**(1) The State Government may, by notification in the official Gazette, make rules for carrying out the provisions of this Act or any other matter which is required to be or may be prescribed.

(2) Every rule made under this Act, shall be laid as soon as may be after it is made, before each House of the State Legislature, while it is in session, for a total period of thirty days, which may be comprised in one session or in two or more successive sessions, and if, before the expiry of the session immediately following the session or the successive sessions as aforesaid, both Houses agree in making any modification, in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule.

**11. Power to remove difficulties.-** (1) If any difficulty arises in giving effect to the provisions of this Act, the State Government may, by order published in the official Gazette, make such provisions not inconsistent with the provisions of this Act as may appear to be necessary for removing the difficulty.

(2) Every order made under this section shall be laid, as soon as may be after it is made, before each House of the State Legislature.

The above translation of ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26) be published in the Official Gazette under clause (3) of Article 348 of the Constitution of India.

T.N. Chaturvedi

Governor of Karnataka

By Order and in the name of the Governor of Karnataka

G.K. BOREGOWDA

Secretary to Government (I/C),

Department of Parliamentary Affairs and Legislation.

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

### ಅಧಿಸೂಚನೆ-I

**ಸಂಖ್ಯೆ: ಸಂವ್ಯಶಾಇ 63 ಶಾಸನ 2005, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್ 2005**
**ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ಸಂಖ್ಯೆ 1864, ದಿನಾಂಕ: 15.10.2005**

ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26)ರ 1ನೇ ಪ್ರಕರಣದ (2)ನೇ ಐಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 2005ರ ಅಕ್ಟೋಬರ್ 15ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಯಲ್ಲಿ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ (ಪ್ರಭಾರ),
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

### ಅಧಿಸೂಚನೆ-II

**ಸಂಖ್ಯೆ: ಸಂವ್ಯಶಾಇ 63 ಶಾಸನ 2005, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್ 2005**
**ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆ ಸಂಖ್ಯೆ 1864, ದಿನಾಂಕ: 15.10.2005**

ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ ಸಂಖ್ಯೆ 26)ರ 6ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗೆ ನಮೂದಿಸಿರುವ0ತೆ ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಿದೆ.

| | | |
|---|---|---|
| (1) | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸಚಿವರು | ಅಧ್ಯಕ್ಷರು |
| (2) | ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು.) | ಸದಸ್ಯರು |
| (3) | ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಜೆಟ್ ಮತ್ತು ಸಂಪನ್ಮೂಲಗಳು) | ಸದಸ್ಯರು |

(4) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ ಸದಸ್ಯರು

(5) ಕರ್ನಾಟಕ ವಿಧಾನಮಂಡಲದ ಅಧಿವೇಶನ ಕರೆಯುವ ಮತ್ತು
ಸಮಾಪನಗೊಳಿಸುವ ವಿಷಯದ ಕಾರ್ಯಹಂಚಿಕೆಗೆ
ಸಂಬಂಧಪಟ್ಟ ಸರ್ಕಾರದ ಸಹ ಕಾರ್ಯದರ್ಶಿ, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ (ಪ್ರಭಾರ),
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

* * * *

## 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 30

## ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004

## ಪ್ರಕರಣಗಳ ಪಟ್ಟಿ

ಪ್ರಕರಣಗಳು:

### ಅಧ್ಯಾಯ - I

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ - II

3. ಠೇವಣಿಗಳನ್ನು ಹಿಂದಿರುಗಿಸಲು ತಪ್ಪಿದಲ್ಲಿ ಸ್ವತ್ತುಗಳ ಜಪ್ತಿ
4. ಆವರಣಗಳನ್ನು ಪ್ರವೇಶಿಸಲು ಮತ್ತು ಕೆಲವೊಂದು ದಸ್ತಾವೇಜುಗಳನ್ನು ತಪಾಸಣೆ ಮಾಡಲು ಅಧಿಕಾರ
5. ಸಕ್ಷಮ ಪ್ರಾಧಿಕಾರಿ
6. ಸಕ್ಷಮ ಪ್ರಾಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು
7. ಸ್ವತ್ತುಗಳ ಮತ್ತು ಠೇವಣಿಗಳ ಹೊಣೆಗಳ ನಿರ್ಧರಣೆ
8. ಸಕ್ಷಮ ಪ್ರಾಧಿಕಾರಿಯಿಂದ ವರದಿ

### ಅಧ್ಯಾಯ - III

9. ಹಣಕಾಸು ಸಂಸ್ಥೆಯಿಂದ ವಂಚನೋದ್ದೇಶದ ತಪ್ಪುವಿಕೆ

### ಅಧ್ಯಾಯ - IV

10. ವಿಶೇಷ ನ್ಯಾಯಾಲಯ
11. ಸ್ವತ್ತುಗಳ ನಗದು ಪರಿವರ್ತನೆ ಮತ್ತು ಠೇವಣಿದಾರರಿಗೆ ಸಂದಾಯಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು
12. ಜಪ್ತಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು
13. ದುರ್ಭಾವನೆಯಿಂದ ಮಾಡಿದ ವರ್ಗಾವಣೆವನ್ನು ಪಡೆದವನ ಸ್ವತ್ತಿನ ಜಪ್ತಿ
14. ಜಪ್ತಿಗೆ ಬದಲಾಗಿ ಭದ್ರತೆ
15. ಜಪ್ತಿ ಮಾಡಿದ ಸ್ವತ್ತಿನ ನಿರ್ವಹಣೆ

16. ಅಪೀಲು

17. ವಿಶೇಷ ಸರ್ಕಾರಿ ಅಭಿಯೋಜಕ

18. ಅಪರಾಧಗಳಿಗೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು

ಅಧ್ಯಾಯ – V

19. ಅಧಿನಿಯಮವು ಇತರ ಕಾನೂನುಗಳಿಗಿಂತ ಹೆಚ್ಚು ಪ್ರಭಾವವುಳ್ಳದ್ದಾಗಿರುವುದು

20. ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ

21. ನಿಯಮಗಳ ರಚನಾಧಿಕಾರ

22. ತೊಂದರೆಗಳನ್ನು ನಿವಾರಿಸಲು ಅಧಿಕಾರ

* * * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ ಕೇಂದ್ರ ಅಧಿನಿಯಮ II) ವ್ಯಾಪ್ತಿಗೆ ಒಳಪಡದಂಥ, ಹಣಕಾಸು ಸಂಸ್ಥೆಗಳು ರಾಜ್ಯದಲ್ಲಿ ತ್ವರಿತ ಗತಿಯಿಂದ ಬೆಳೆಯುತ್ತಿವೆ. ಹೆಚ್ಚಿನ ದರದ ಬಡ್ಡಿ ನೀಡುತ್ತೇವೆ ಮತ್ತು ಸುಲಭದ ಗಳಿಕೆ ದೊರೆಯುತ್ತದೆ ಎಂಬ ಆಶ್ವಾಸನೆ ನೀಡಿ ಹೆಚ್ಚಾಗಿ ಮಧ್ಯಮ ವರ್ಗ ಮತ್ತು ಬಡವರ್ಗದ ಸಾರ್ವಜನಿಕರಿಂದ ಈ ಹಣಕಾಸು ಸಂಸ್ಥೆಗಳು ಠೇವಣಿ ರೂಪದಲ್ಲಿ ಹಣ ಪಡೆಯುತ್ತಿವೆ. ಇಂಥ ಅನೇಕ ಹಣಕಾಸು ಸಂಸ್ಥೆಗಳು ಅವಧಿ ಮುಕ್ತಾಯದ ತರುವಾಯ ಸಾರ್ವಜನಿಕರಿಗೆ ಹಣ ಹಿಂತಿರುಗಿಸಲು ತಪ್ಪಿ, ಠೇವಣಿದಾರರಿಗೆ ನ್ಯಾಯವಾಗಿ ಬರಬೇಕಾದಂಥ ಹಣವನ್ನು ನೀಡದೆ ಮೋಸ ಮಾಡಿವೆ. ಠೇವಣಿದಾರರ ಹಿತಾಸಕ್ತಿಗಳನ್ನು ರಕ್ಷಿಸುವಂತಹ ಒಂದು ಕಾನೂನು ವ್ಯವಸ್ಥೆ ಬೇಕೆಂದು ಠೇವಣಿದಾರರ ಸಂಘಗಳು ಮತ್ತು ಸಾರ್ವಜನಿಕರು ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿರುತ್ತಾರೆ. ಭಾರತದ ರಿಸರ್ವ್ ಬ್ಯಾಂಕ್ ಸಹ ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸಲು ರಾಜ್ಯ ಸರ್ಕಾರ ಒಂದು ಕಾನೂನನ್ನು ರಚಿಸಬೇಕೆಂದು ಸಲಹೆ ನೀಡಿದೆ. ಆದ್ದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳಲ್ಲದ, ಅಂಥ ಇತರ ಹಣಕಾಸು ಸಂಸ್ಥೆಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಒಂದು ಸೂಕ್ತ ಶಾಸನವನ್ನು ಜಾರಿಗೆ ತರುವುದು ಅವಶ್ಯ ಎಂದು ಪರಿಗಣಿಸಲಾಗಿದೆ.

ಇದಕ್ಕನುಸಾರವಾಗಿ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2000 (2000ದ ವಿಧಾನ ಸಭೆಯ ವಿಧೇಯಕ ಸಂಖ್ಯೆ 36) ವನ್ನು ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಯಿತು ಮತ್ತು ಎರಡೂ ಸದನಗಳು ಅದನ್ನು ಅನುಮೋದಿಸಿದವು. ಸದರಿ ವಿಧೇಯಕವನ್ನು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯುವುದಕ್ಕಾಗಿ ಭಾರತ ಸರ್ಕಾರಕ್ಕೆ

ಕಳುಹಿಸಲಾಯಿತು. ಆದಾಗ್ಯೂ, ಈಗಾಗಲೇ ರಾಜ್ಯ ವಿಧಾನ ಮಂಡಲದಿಂದ ಈ ವಿಧೇಯಕವನ್ನು ಅನುಮೋದಿಸಲಾಗಿರುವುದರಿಂದ ಹಣಕಾಸು ಕಂಪನಿ ವ್ಯವಹಾರಗಳ (ಬ್ಯಾಂಕಿಂಗ್ ವಿಭಾಗ) ಮಂತ್ರಾಲಯವು ಸಲಹೆ ನೀಡಿದಂಥ ತಿದ್ದುಪಡಿಗಳನ್ನು ಅಳವಡಿಸಲಾಗಿಲ್ಲ ಎಂದು ಆ ವಿಧೇಯಕಕ್ಕೆ ತಮ್ಮ ಅನುಮೋದನೆ ನೀಡದೆ ಭಾರತದ ರಾಷ್ಟ್ರಪತಿಯವರು ತಡೆಹಿಡಿದಿದ್ದರು.

ಈ ವಿಧೇಯಕವು ಇತರ ವಿಷಯಗಳೊಂದಿಗೆ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸುತ್ತದೆ, ಎಂದರೆ:–

(I) "ತಪ್ಪುವಿಕೆ" ಎಂಬ ಪದವನ್ನು ವಾಗ್ದಾನ ಮಾಡಿದಂತೆ ಠೇವಣಿಯನ್ನು ಹಿಂದಿರುಗಿಸಲು ಅಥವಾ ಬಡ್ಡಿ, ಬೋನಸ್ ಮತ್ತು ಲಾಭವನ್ನು ಸಂದಾಯ ಮಾಡಲು ಅಥವಾ ಭರವಸೆ ನೀಡಿದ್ದ ಸೇವೆಯನ್ನು ನೆರವೇರಿಸಲು ವಂಚನೆಯ ಉದ್ದೇಶದಿಂದ ತಪ್ಪುವುದೂ ಸೇರುವಂತೆ ಪರಿಭಾಷಿಸಲಾಗಿದೆ;

(ii) ಠೇವಣಿ ಹಿಂತಿರುಗಿಸಲು ತಪ್ಪಿದ ಸಂದರ್ಭದಲ್ಲಿ ಹಣಕಾಸು ಸಂಸ್ಥೆಯ ಮತ್ತು ಹಣಕಾಸು ಸಂಸ್ಥೆಯ ಪ್ರವರ್ತಕನ, ನಿರ್ದೇಶಕನ, ಪಾಲುದಾರನ, ವ್ಯವಸ್ಥಾಪಕನ ಅಥವಾ ಸದಸ್ಯನ ಸ್ವತ್ತನ್ನು ಜಪ್ತಿ ಮಾಡುವುದು;

(iii) ಹಣಕಾಸು ಸಂಸ್ಥೆಯು ಸದ್ಭಾವನೆಯಿಂದಲ್ಲದೆ ಮತ್ತು ಒಂದು ಪ್ರತಿಫಲಕ್ಕಾಗಿ ಅಲ್ಲದೆ ಸ್ವತ್ತನ್ನು ವರ್ಗಾಯಿಸಿದಾಗ ದುರುದ್ದೇಶದಿಂದ ವರ್ಗಾವಣೆ ಪಡೆದಿರುವವರ ಸ್ವತ್ತನ್ನು ಜಪ್ತಿ ಮಾಡುವುದು;

(iv) ಸದರಿ ಸ್ವತ್ತುಗಳ ಮೇಲೆ ನಿಯಂತ್ರಣವನ್ನು ಚಲಾಯಿಸಲು ಸಕ್ಷಮ ಪ್ರಾಧಿಕಾರಿಯ ನೇಮಕ ಹಾಗೂ ಸಕ್ಷಮ ಪ್ರಾಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(v) ಎಲ್ಲಾ ಮೊಕದ್ದಮೆಗಳ ಬಗ್ಗೆ ವ್ಯವಹರಿಸಲು ವಿಶೇಷ ನ್ಯಾಯಾಲಯದ ರಚನೆ;

(vi) ಈ ಕಾನೂನಿನ ಉಪಬಂಧಗಳ ಉಲ್ಲಂಘನೆಯು ಹತ್ತು ವರ್ಷಗಳ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ದಂಡನೀಯವಾಗಿದ್ದು ಸದರಿ ಕಾನೂನುಗಳ ಉಪಬಂಧಗಳ ಉಲ್ಲಂಘನೆಗಾಗಿ ಪ್ರವರ್ತಕನ, ಪಾಲುದಾರನ, ನಿರ್ದೇಶಕನ, ವ್ಯವಸ್ಥಾಪಕನ ಅಥವಾ ಆ ಹಣಕಾಸು ಸಂಸ್ಥೆಯ ಆಡಳಿತ ನಿರ್ವಹಣೆಗೆ ಜವಾಬ್ದಾರನಾಗಿದ್ದ ಯಾರೇ ಇತರ ವ್ಯಕ್ತಿಯ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡುವುದು.

ಇತರ ಕೆಲವು ಆನುಷಂಗಿಕವಾದ ಮತ್ತು ಪ್ರಾಸಂಗಿಕವಾದ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[2004ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 2]

* * * *

## 2005ರ ಕರ್ನಾಟಕ ಅಧಿನಿಯಮ ಸಂಖ್ಯೆ 30

**(2005ರ ಡಿಸೆಂಬರ್ ಇಪ್ಪತ್ತೆರಡನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

## ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004

**[2005ರ ಡಿಸೆಂಬರ್ ಹದಿನಾಲ್ಕನೆ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ]**

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

### ಅಧ್ಯಾಯ - I

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಸಕ್ಷಮ ಪ್ರಾಧಿಕಾರಿ" ಎಂದರೆ, 5ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರಾಧಿಕಾರಿ;

(2) "ಠೇವಣಿ" ಎಂಬುದು ಯಾವುದೇ ಹಣಕಾಸು ಸಂಸ್ಥೆಯಿಂದ, ನಿಗದಿತ ಅವಧಿಯ ತರುವಾಯ ಅಥವಾ ಅನ್ಯಥಾ, ಬಡ್ಡಿ, ಬೋನಸ್ಸು, ಲಾಭ ಅಥವಾ ಇತರ ಯಾವುದೇ ಪ್ರಯೋಜನದಿಂದ ಕೂಡಿರಲಿ ಅಥವಾ ಇಲ್ಲದಿರಲಿ, ನಗದಾಗಿ ಅಥವಾ ವಸ್ತುರೂಪದಲ್ಲಿ ಅಥವಾ ನಿರ್ದಿಷ್ಟಪಡಿಸಿದ ಸೇವೆಯ ರೂಪದಲ್ಲಿ ಹಿಂದಿರುಗಿಸಬೇಕಾದ ಹಣದ ಯಾವುದೇ ಸ್ವೀಕೃತಿಯನ್ನು ಅಥವಾ ಯಾವುದೇ ಬೆಲೆಬಾಳುವ ವಸ್ತುವಿನ ಸ್ವೀಕಾರವನ್ನು ಒಳಗೊಳ್ಳುತ್ತದೆ ಮತ್ತು ಯಾವಾಗಲೂ ಒಳಗೊಂಡಿರುವುದಾಗಿ ಭಾವಿಸತಕ್ಕದ್ದು, ಆದರೆ ಅದು ಈ ಮುಂದಿನವುಗಳನ್ನು ಒಳಗೊಳ್ಳುವುದಿಲ್ಲ, ಎಂದರೆ,-

(I) **ಷೇರು** ಬಂಡವಾಳದ ಮೂಲಕ ಅಥವಾ ಡಿಬೆಂಚರು, ಬಾಂಡ್ ಮೂಲಕ ಅಥವಾ ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಲಿ ಅಧಿನಿಯಮ, 1992ರ ಅಡಿಯಲ್ಲಿ ಸ್ಥಾಪನೆಯಾದ ಭಾರತೀಯ ಭದ್ರತೆಗಳ ಮಂಡಲಿಯು ನೀಡಿರುವ ಮಾರ್ಗದರ್ಶಿಸೂತ್ರಗಳ ಮತ್ತು ರಚಿಸಿದ ವಿನಿಮಯಗಳ ವ್ಯಾಪ್ತಿಗೆ ಒಳಪಟ್ಟ ಇತರ ಯಾವುದೇ ಲಿಖಿತ ಪತ್ರದ ಮೂಲಕ ಸಂಗ್ರಹಿಸಲಾದ ಮೊಬಲಗು;

(ii) ಒಂದು ಫರ್ಮಿನ ಪಾಲುದಾರರು ಬಂಡವಾಳವಾಗಿ ನೀಡಿದ ಮೊಬಲಗು;

(iii) ಒಂದು ಅನುಸೂಚಿತ ಬ್ಯಾಂಕಿನಿಂದ ಅಥವಾ ಒಂದು ಸಹಕಾರಿ ಬ್ಯಾಂಕಿನಿಂದ ಅಥವಾ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 15) 5ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಲಾದ ಇತರ ಯಾವುದೇ ಬ್ಯಾಂಕಿಂಗ್ ಸಂಸ್ಥೆಯಿಂದ ಸ್ವೀಕರಿಸಲಾದ ಮೊಬಲಗು;

(iv) ಈ ಮುಂದಿನವುಗಳಿಂದ ಸ್ವೀಕರಿಸಲಾದ ಯಾವುದೇ ಮೊಬಲಗು,–

(ಎ) ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್,

(ಬಿ) ಒಂದು ರಾಜ್ಯ ಹಣಕಾಸು ನಿಗಮ,

(ಸಿ) ಕಂಪನಿಗಳ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 1) 4ಎ–ಪ್ರಕರಣದಲ್ಲಿ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಹಣಕಾಸು ಸಂಸ್ಥೆ; ಅಥವಾ

(ಡಿ) ಈ ಸಂಬಂಧದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಇತರ ಯಾವುದೇ ಸಂಸ್ಥೆ;

(v) ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಈ ಮುಂದಿನವುಗಳ ರೂಪದಲ್ಲಿ ಸ್ವೀಕರಿಸಲಾದ ಮೊಬಲಗುಗಳು,–

(ಎ) ಭದ್ರತಾ ಠೇವಣಿ

(ಬಿ) ವ್ಯಾಪಾರಿ ಠೇವಣಿ

(ಸಿ) ಸಂಚಕಾರ ಹಣ

(ಡಿ) ಸರಕುಗಳ ಅಥವಾ ಸೇವೆಗಳ ಆದೇಶಕ್ಕೆ ಪ್ರತಿಯಾಗಿ ನೀಡಿದ ಮುಂಗಡ;

(vi) ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಫರ್ಮ್‌ನಿಂದ ಅಥವಾ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ, ಲೇವಾದೇವಿಗೆ ಸಂಬಂಧಪಟ್ಟ ಯಾವುದೇ ಅಧಿನಿಯಮಿತಿಯ

ಅಡಿಯಲ್ಲಿ ನೋಂದಾಯಿತವಾದ ವ್ಯಕ್ತಿಗಳ ಸಂಘದಿಂದ ಸ್ವೀಕರಿಸಲಾದ ಯಾವುದೇ ಮೊಬಲಗು: ಮತ್ತು

(vii) ಒಂದು 'ಚಿಟ್' ಸಂಬಂಧದಲ್ಲಿ ವಂತಿಗೆಯ ರೂಪದಲ್ಲಿ ಸ್ವೀಕರಿಸಲಾದ ಯಾವುದೇ ಮೊಬಲಗು,

**ವಿವರಣೆ I.–** 'ಚಿಟ್' ಎಂಬುದಕ್ಕೆ, ಚಿಟ್‌ಫಂಡ್‌ಗಳ ಅಧಿನಿಯಮ, 1982ರ (1982ರ ಕೇಂದ್ರ ಅಧಿನಿಯಮ 40) 2ನೇ ಪ್ರಕರಣದ (ಬಿ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಲಾದ ಅರ್ಥವಿರುತ್ತದೆ.

**ವಿವರಣೆ II.–** ಯಾವುದೇ ಸ್ವತ್ತಿನ ಮಾರಾಟದ ಮೇಲೆ (ಚರಸ್ವತ್ತಾಗಿರಲಿ ಅಥವಾ ಸ್ಥಿರಸ್ವತ್ತಾಗಿರಲಿ) ಮಾರಾಟದಾರನಿಂದ ಖರೀದಿದಾರನಿಗೆ ಕೊಡಲಾದ ಸಾಲವನ್ನು ಈ ಖಂಡದ ಉದ್ದೇಶಗಳಿಗಾಗಿ ಠೇವಣಿ ಎಂಬುದಾಗಿ ಪರಿಗಣಿಸತಕ್ಕದ್ದಲ್ಲ.

(3) "ಠೇವಣಿದಾರ" ಎಂದರೆ, ಹಣಕಾಸು ಸಂಸ್ಥೆಯಲ್ಲಿ ಠೇವಣಿ ಇಟ್ಟ ವ್ಯಕ್ತಿ,

(4) 'ಹಣಕಾಸು ಸಂಸ್ಥೆ' ಎಂದರೆ, ಯಾವುದೇ ಯೋಜನೆ ಅಥವಾ ವ್ಯವಸ್ಥೆಯ ಮೇರೆಗೆ ಅಥವಾ ಇತರ ಯಾವುದೇ ರೀತಿಯಲ್ಲಿ ಠೇವಣಿಗಳನ್ನು ಸ್ವೀಕರಿಸುವ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಆದರೆ, ಅದು ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಒಂದು ನಿಗಮ ಅಥವಾ ಸಹಕಾರ ಸಂಘವನ್ನು ಅಥವಾ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) 5ನೇ ಪ್ರಕರಣದ (ಸಿ) ಖಂಡದ ಮೇರೆಗೆ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಯನ್ನು ಒಳಗೊಳ್ಳುವುದಿಲ್ಲ;

(5) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(6) "ವಿಶೇಷ ನ್ಯಾಯಾಲಯ" ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ಸ್ಥಾಪನೆಯಾದ ನ್ಯಾಯಾಲಯ.

## ಅಧ್ಯಾಯ – II

**3. ಠೇವಣಿಗಳನ್ನು ಹಿಂದಿರುಗಿಸಲು ತಪ್ಪಿದಲ್ಲಿ ಸ್ವತ್ತುಗಳ ಜಪ್ತಿ.–** (1) ಸರ್ಕಾರವು ಅಥವಾ ತಮ್ಮ ತಮ್ಮ ಅಧಿಕಾರವ್ಯಾಪ್ತಿಯೊಳಗೆ ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ದೂರಿನ ಅಥವಾ ಮೋಸದ ವ್ಯವಹಾರದ ಸಂಬಂಧದಲ್ಲಿ, ಸ್ವಪ್ರೇರಣೆಯಿಂದ ಅಥವಾ ಫಿರ್ಯಾದನ್ನು ಸ್ವೀಕರಿಸಿದ ಮೇಲೆ ತನಿಖೆ ನಡೆಸುವಂತೆ ಮಾಡಬಹುದು. ಜಿಲ್ಲಾ ಮ್ಯಾಜಿಸ್ಟ್ರೇಟರು ಫಿರ್ಯಾದಿನ ಜೊತೆಗೆ ತಮ್ಮ ವರದಿಯನ್ನು ಆದಷ್ಟು ಬೇಗನೆ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(i) ಯಾವುದೇ ಹಣಕಾಸು ಸಂಸ್ಥೆಯು,–

(ಎ) ಠೇವಣಿಯ ಅವಧಿ ಪೂರ್ಣಗೊಂಡ ಮೇಲೆ ಅಥವಾ ಠೇವಣಿದಾರನು ಕೇಳಿದಾಗ ಠೇವಣಿಯನ್ನು ಹಿಂದಿರುಗಿಸಲು; ಅಥವಾ

(ಬಿ) ಬಡ್ಡಿಯನ್ನು ಅಥವಾ ಇತರ ಭರವಸೆ ನೀಡಿದ ಪ್ರಯೋಜನವನ್ನು ನೀಡಲು; ಅಥವಾ

(ಸಿ) ಅಂಥ ಠೇವಣಿಗೆ ಪ್ರತಿಯಾಗಿ ಸೇವೆಯನ್ನು ಒದಗಿಸಲು,

– ತಪ್ಪಿದೆ ಎಂಬುದಾಗಿ ಯಾವೊಬ್ಬ ಠೇವಣಿದಾರನಿಂದ ದೂರನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ಸರ್ಕಾರಕ್ಕೆ ಮನದಟ್ಟಾದರೆ; ಅಥವಾ

(ii) ಯಾವುದೇ ಹಣಕಾಸು ಸಂಸ್ಥೆಯು ಠೇವಣಿದಾರರನ್ನು ವಂಚಿಸುವ ಉದ್ದೇಶದಿಂದ ಠೇವಣಿದಾರರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಲು ಲೆಕ್ಕಹಾಕಿದ ರೀತಿಯಲ್ಲಿ ವರ್ತಿಸುತ್ತಿದೆ ಎಂದು ಸರ್ಕಾರಕ್ಕೆ ನಂಬಲು ಕಾರಣವಿದ್ದಲ್ಲಿ, ಅಥವಾ

(iii) ಅಂಥ ಹಣಕಾಸು ಸಂಸ್ಥೆಯು, ಠೇವಣಿಗಳನ್ನು ಹಿಂದಿರುಗಿಸುವ ಅಥವಾ ಬಡ್ಡಿ ಸಂದಾಯ ಮಾಡುವ ಅಥವಾ ಭರವಸೆ ನೀಡಿದ ಇತರ ಪ್ರಯೋಜನಗಳನ್ನು ಅಥವಾ ಠೇವಣಿಯನ್ನು ಸ್ವೀಕರಿಸಿದುದಕ್ಕೆ ಪ್ರತಿಯಾಗಿ ಸೇವೆಗಳನ್ನು ಒದಗಿಸುವ ಸಂಭವವಿಲ್ಲವೆಂದು ಸರ್ಕಾರಕ್ಕೆ ಮನದಟ್ಟಾದಲ್ಲಿ,

ಅಂಥ ಹಣಕಾಸು ಸಂಸ್ಥೆಯ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಸರ್ಕಾರವು ಹಣಕಾಸು ಸಂಸ್ಥೆಯ ಹೆಸರಿನಲ್ಲಿ ಅಥವಾ ಇತರ ಯಾವೊಬ್ಬ ವ್ಯಕ್ತಿಯ ಹೆಸರಿನಲ್ಲಿ ಹಣಕಾಸು ಸಂಸ್ಥೆಯು ಸಂಗ್ರಹಿಸಿದ ಠೇವಣಿಗಳಿಂದ ಮತ್ತು ಅವುಗಳ ಪೈಕಿಯಿಂದ ಆರ್ಜಿಸಲಾಗಿದೆಯೆಂದು ನಂಬಲಾದ ಹಣವನ್ನು ಅಥವಾ ಸ್ವತ್ತನ್ನು ಮತ್ತು ಅಂಥ ಹಣ ಅಥವಾ ಇತರ ಸ್ವತ್ತು ಜಪ್ತಿ ಮಾಡುವುದಕ್ಕಾಗಿ ಲಭ್ಯವಿಲ್ಲವೆಂದು ಅಥವಾ ಠೇವಣಿಗಳನ್ನು ಮರು ಸಂದಾಯ ಮಾಡಲು ಸಾಕಷ್ಟು ಇಲ್ಲವೆಂದು ಕಂಡುಬಂದರೆ, ಸದರಿ ಹಣಕಾಸು ಸಂಸ್ಥೆಗಳ ಅಂಥ ಇತರ ಸ್ವತ್ತನ್ನು ಅಥವಾ ಸದರಿ ಹಣಕಾಸು ಸಂಸ್ಥೆಗಳ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದರಿ ಹಣಕಾಸು ಸಂಸ್ಥೆಗಳ ಸದಸ್ಯರ ಅಥವಾ ಯಾವೊಬ್ಬ ಇತರ ವ್ಯಕ್ತಿಯ ವೈಯಕ್ತಿಕ ಸ್ವತ್ತನ್ನು, ಜಪ್ತಿ ಮಾಡುವ ಒಂದು ಆದೇಶವನ್ನು, ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಹೊರಡಿಸಬಹುದು.

(3) ಸರ್ಕಾರವು, (2)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ತಾತ್ಕಾಲಿಕ ಆದೇಶವನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಮತ್ತು ವ್ಯಾಪಕ ಪ್ರಚಾರವುಳ್ಳ ಎರಡು ದಿನಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ಹಾಗೆ ಜಪ್ತಿ ಮಾಡಲಾದ ಸ್ವತ್ತಿನ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(4) (2)ನೇ ಉಪ–ಪ್ರಕರಣದ ಅಡಿಯಲ್ಲಿಯ ಆದೇಶದ ಪ್ರಕಟಣೆಯ ತರುವಾಯ, ಹಣಕಾಸು ಸಂಸ್ಥೆಯ ಮತ್ತು ಅದರಲ್ಲಿ ಹೇಳಿದ ವ್ಯಕ್ತಿಗಳ ಎಲ್ಲ ಸ್ವತ್ತುಗಳು ಮತ್ತು ಆಸ್ತಿಗಳು, ವಿಶೇಷ

ನ್ಯಾಯಾಲಯದಿಂದ ಮುಂದಿನ ಆದೇಶವು ಬರುವವರೆಗೂ ಸರ್ಕಾರವು ನೇಮಕ ಮಾಡಿದ ಸಕ್ಷಮ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

**4. ಆವರಣಗಳನ್ನು ಪ್ರವೇಶಿಸಲು ಮತ್ತು ಕೆಲವೊಂದು ದಸ್ತಾವೇಜುಗಳನ್ನು ತಪಾಸಣೆ ಮಾಡಲು ಅಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರಿಯು ಅಥವಾ ಈ ಸಂಬಂಧದಲ್ಲಿ ಅವನು ಪ್ರಾಧಿಕರಿಸಿದ ಇತರ ಯಾವೊಬ್ಬ ಪ್ರಾಧಿಕಾರಿಯು, ಯಾವುದೇ ರಿಜಿಸ್ಟರು, ಪುಸ್ತಕ, ದಾಖಲೆ, ಕಾಗದಪತ್ರ, ಅರ್ಜಿಯನ್ನು, ವಿದ್ಯುನ್ಮಾನ ಮಾಹಿತಿ ಸಂಗ್ರಹಣೆ ಮತ್ತು ಮರು ಪಡೆಯುವಿಕೆ ಸಾಧನದಲ್ಲಿ ಅಥವಾ ಮಾಧ್ಯಮದಲ್ಲಿನ ಮಾಹಿತಿಯನ್ನು, ವಿಲೇಖ ಅಥವಾ ವ್ಯವಹರಣೆಗಳನ್ನು ಇಡಲಾಗಿದೆ ಎಂದು ನಂಬಲು ಕಾರಣವಿರುವ ಯಾವುವೇ ಆವರಣಗಳನ್ನು ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ತಪಾಸಣೆ ಮಾಡಲು ಮತ್ತು ತಾನು ಅವಶ್ಯಕವೆಂದು ಭಾವಿಸುವಂಥ ಟಿಪ್ಪಣಿಗಳನ್ನು ಮತ್ತು ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

(2) ಅಂಥ ರಿಜಿಸ್ಟರು, ಪುಸ್ತಕ, ದಾಖಲೆ, ಕಾಗದಪತ್ರ, ಅರ್ಜಿ, ವಿಲೇಖ ಅಥವಾ ವ್ಯವಹರಣೆಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಅಥವಾ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಸೂಕ್ತವಾದ ಎಲ್ಲಾ ಕಾಲಗಳಲ್ಲೂ ಅವುಗಳನ್ನು ಹಾಜರುಪಡಿಸತಕ್ಕದ್ದು ಅಥವಾ ಸಕ್ಷಮ ಪ್ರಾಧಿಕಾರಿಯು ಅಥವಾ ಸಕ್ಷಮ ಪ್ರಾಧಿಕಾರಿಯು ಪ್ರಾಧಿಕರಿಸಿದ ಯಾವೊಬ್ಬ ಇತರ ಪ್ರಾಧಿಕಾರಿಯು, ಅವುಗಳನ್ನು ತಪಾಸಣೆ ಮಾಡಲು ಮತ್ತು ತಾನು ಅವಶ್ಯಕವೆಂದು ಭಾವಿಸುವಂತೆ ಅವುಗಳ ಟಿಪ್ಪಣಿ ಅಥವಾ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಲು ಮತ್ತು ಅವಶ್ಯಕವಾದರೆ ಅವುಗಳನ್ನು ವಶಪಡಿಸಿಕೊಳ್ಳಲು ಮತ್ತು ಪರಿಬದ್ಧಗೊಳಿಸಲು ಅನುಮತಿಸತಕ್ಕದ್ದು:

ಪರಂತು, (ವ್ಯವಹಾರದ ಜೊತೆ ವಾಸದ ಸ್ಥಳವಾಗಿರದ) ಯಾವ ವಾಸದ ಸ್ಥಳವನ್ನೂ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನುಳ್ಳ ಮ್ಯಾಜಿಸ್ಟ್ರೇಟರು ನೀಡಿದ ಶೋಧನಾ ವಾರೆಂಟಿನ ಅಧಿಕಾರದ ಹೊರತಾಗಿ ಹಾಗೆ ಪ್ರವೇಶಿಸತಕ್ಕದ್ದಲ್ಲ ಮತ್ತು ಶೋಧಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿನ ಎಲ್ಲ ಶೋಧನೆಗಳನ್ನು ಸಾಧ್ಯವಾದಷ್ಟುಮಟ್ಟಿಗೆ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ, II) ಉಪಬಂಧಗಳಿಗನುಸಾರ ಮಾಡತಕ್ಕದ್ದು.

**5. ಸಕ್ಷಮ ಪ್ರಾಧಿಕಾರಿ.-** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ "ಸಕ್ಷಮ ಪ್ರಾಧಿಕಾರಿ"ಯಾಗಿ, ಅಸಿಸ್ಟೆಂಟ್ ಕಮೀಷನರರ ಹುದ್ದೆಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಅಧಿಸೂಚನೆ ಮೂಲಕ ನೇಮಕ ಮಾಡತಕ್ಕದ್ದು.

(2) ಸಕ್ಷಮ ಪ್ರಾಧಿಕಾರಿಯು 3ನೇ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಜಪ್ತಿಯ ಆದೇಶವನ್ನು ನಿರುಪಾಧಿಕಗೊಳಿಸುವುದಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಜೊತೆಯಲ್ಲಿ, 3ನೇ ಪ್ರಕರಣದ ಅಡಿಯಲ್ಲಿ ಯಾವ ಕಾರಣಗಳ ಮೇಲೆ ಸದರಿ ಆದೇಶವನ್ನು ಹೊರಡಿಸಲಾಗಿದೆಯೋ ಅವುಗಳನ್ನು ತಿಳಿಸುವ ಮತ್ತು ಠೇವಣಿಗಳಿಂದ ಆರ್ಜಿಸಲಾಗಿದೆ ಎಂದು ನಂಬಲಾದ ಹಣದ ಮೊತ್ತ ಅಥವಾ ಇತರ ಸ್ವತ್ತು ಮತ್ತು ಯಾರ ಹೆಸರಿನಲ್ಲಿ ಅಂಥ ಸ್ವತ್ತನ್ನು ತೊಡಗಿಸಲಾಗಿದೆಯೋ ಅಥವಾ ಆರ್ಜಿಸಲಾಗಿದೆ ಎಂದು ನಂಬಲಾಗಿದೆಯೋ ಆ ವ್ಯಕ್ತಿಗಳ ಬಗ್ಗೆ ಅಥವಾ 3ನೇ ಪ್ರಕರಣದ ಅಡಿಯಲ್ಲಿ ಜಫ್ತಿ ಮಾಡಲಾದ ಯಾವುದೇ ಇತರ ಸ್ವತ್ತಿನ ಬಗ್ಗೆ ವಿವರಗಳು ಯಾವುವಾದರೂ ಇದ್ದರೆ, ಅವುಗಳನ್ನು ತಿಳಿಸುವ ಒಂದು ಅಥವಾ ಹೆಚ್ಚು ಅಫಿದಾವಿತ್ತುಗಳು ಇರತಕ್ಕದ್ದು.

(4) ಒಂದು ವಿಶೇಷ ನ್ಯಾಯಾಲಯ ಅಥವಾ ಪದಾಂಕಿತ ನ್ಯಾಯಾಲಯ ಅಥವಾ ನ್ಯಾಯಾಂಗ ವೇದಿಕೆಯ ಅಧಿಕಾರ ವ್ಯಾಪ್ತಿಯಲ್ಲಿರುವ ಒಂದು ಹಣಕಾಸು ಸಂಸ್ಥೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಧಿಸೂಚಿಸಲಾದ ಯಾವುದೇ ವ್ಯಕ್ತಿಗೆ ಸೇರಿರುವಂಥ ಅಥವಾ ಸೇರಿದೆ ಎಂದು ತೋರಿಕೆಗೇ ಗೊತ್ತಾಗುವಂತಹ ಹಣ ಅಥವಾ ಆಸ್ತಿ ಅಥವಾ ಸ್ವತ್ತಿಗೆ ಸಂಬಂಧಪಟ್ಟ ವಿವಾದ ಅಥವಾ ವಸ್ತು ವಿಷಯವನ್ನು ಕುರಿತು ನ್ಯಾಯ ನಿರ್ಣಯ ಮಾಡಲು ಯಾವುದೇ ಇದೇ ತರಹದ ಅಧಿನಿಯಮಿತಿ ಅಡಿಯಲ್ಲಿ ಯಾವುದೇ ಇತರ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ರಚಿಸಿರುವ ಅಥವಾ ಯಾವುದೇ ಅಧಿಕಾರಗಳನ್ನು ವಹಿಸಿಕೊಟ್ಟಿರುವ ಯಾವುದೇ ಅಂಥ ವಿಶೇಷ ನ್ಯಾಯಾಲಯ, ಪದಾಂಕಿತ ನ್ಯಾಯಾಲಯ ಅಥವಾ ನ್ಯಾಯಾಂಗ ವೇದಿಕೆಗೂ ಸಕ್ಷಮ ಪ್ರಾಧಿಕಾರಿಯು ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮವನ್ನು ನೀಡುವುದಕ್ಕಾಗಿ ಸೂಕ್ತ ಆದೇಶಗಳನ್ನು ನೀಡಬೇಕೆಂದು ಒಂದು ಅರ್ಜಿಯನ್ನು ಹಾಕಿಕೊಳ್ಳಬಹುದು.

**6. ಸಕ್ಷಮ ಪ್ರಾಧಿಕಾರಿಯ ಕರ್ತವ್ಯಗಳು ಮತ್ತು ಅಧಿಕಾರಗಳು.–** (1) ನೇಮಕದ ಆದೇಶವನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು, ತ್ವರಿತವಾಗಿ ಸಂಬಂಧಪಟ್ಟ ಹಣಕಾಸು ಸಂಸ್ಥೆಯ ಎಲ್ಲ ಹಣ ಮತ್ತು ಸ್ವತ್ತುಗಳ ವಾಸ್ತವಿಕ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಅವಶ್ಯಕ ಮತ್ತು ಯುಕ್ತವಾದಂಥ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಿಯು ಮೇಲ್ಕಂಡ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ನಿಹಿತವಾದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸಕ್ಷಮ ಪ್ರಾಧಿಕಾರಿಯು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಬಹುದು ಮತ್ತು,–

(ಎ) ಯಾವೊಬ್ಬ ಪೋಲೀಸ್ ಪ್ರಾಧಿಕಾರಿಯ ಅಥವಾ ಯಾವುದೇ ಇತರ ಪ್ರಾಧಿಕಾರಿಯ ಅಥವಾ ವ್ಯಕ್ತಿಯ ನೆರವು ಕೋರಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಕೋರಿಕೆಯ ಮೇಲೆ ಅವಶ್ಯಕ ನೆರವು ನೀಡುವುದು ಪೋಲೀಸ್ ಪ್ರಾಧಿಕಾರಿಯ ಅಥವಾ ಅಂಥ ಇತರ ಪ್ರಾಧಿಕಾರಿಯ ಅಥವಾ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು;

(ಬಿ) ಯಾವುದೇ ಅನುಸೂಚಿತ ವಾಣಿಜ್ಯ ಬ್ಯಾಂಕಿನಲ್ಲಿ, ಬ್ಯಾಂಕ್ ಖಾತೆ ತೆರೆಯಲು ಮತ್ತು ವಸೂಲ್ಮಾಡಿದ ಎಲ್ಲ ಹಣವನ್ನು ಜಮೆ ಮಾಡಲು ಮತ್ತು ಸಕ್ಷಮ ಪ್ರಾಧಿಕಾರಿಯಾಗಿ ತನ್ನ ಸಾಮರ್ಥ್ಯದಲ್ಲಿ ಸ್ವೀಕರಿಸಿದ ಹಣದ ಸಂಬಂಧದಲ್ಲಿ ವ್ಯವಹರಿಸುವಾಗ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಹಕ್ಕುಳ್ಳವನಾಗಿರತಕ್ಕದ್ದು;

(ಸಿ) ಹಣಕಾಸು ಸಂಸ್ಥೆಯ ಯಾವುದೇ ಹಣ ಅಥವಾ ಸ್ವತ್ತುಗಳ ಸ್ವಾಧೀನತೆಯಲ್ಲಿರುವವನೆಂದು ಅಥವಾ ನಿಯಂತ್ರಣ ಹೊಂದಿರುವವನೆಂದು ನಂಬಲಾದ ಯಾವೊಬ್ಬ ವ್ಯಕ್ತಿಯನ್ನು, ಅವಶ್ಯಕ ಮಾಹಿತಿಯನ್ನು ಒದಗಿಸುವಂತೆ ಮತ್ತು ಅಂಥ ಸ್ವತ್ತುಗಳ ಸ್ವಾಧೀನತೆಯನ್ನು ಸಕ್ಷಮ ಪ್ರಾಧಿಕಾರಿಗೆ ಒಪ್ಪಿಸುವಂತೆ ಅಗತ್ಯಪಡಿಸಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ವ್ಯಕ್ತಿಯು ವಿಳಂಬ ಮಾಡದೇ ಕೋರಿಕೆಯನ್ನು ಪಾಲಿಸತಕ್ಕದ್ದು;

(ಡಿ) ಕಾನೂನು ವೃತ್ತಿಗಾರರನ್ನು ಅಥವಾ ಚಾರ್ಟರ್ಡ್ ಅಕೌಂಟೆಂಟರನ್ನು ಅಥವಾ ಹಣಕಾಸು ಸಂಸ್ಥೆಯ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಮತ್ತು ಸ್ವತ್ತುಗಳನ್ನು ನಗದಾಗಿ ಪರಿವರ್ತಿಸಿಕೊಳ್ಳುವುದಕ್ಕಾಗಿ ಯಾರ ಸೇವೆಗಳು ಅವಶ್ಯಕವಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ನೇಮಕ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು;

(ಇ) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಮಾರಾಟ ಮಾಡಬಹುದಾದ ಭದ್ರತಾ ಪತ್ರದ ಅಥವಾ ವರ್ಗಾವಣೀಯ ಲಿಖಿತ ಪತ್ರದ ಸಂಬಂಧದಲ್ಲಿ, ಅದನ್ನು ಮಾರಾಟ ಮಾಡಲು, ಸ್ವೀಕರಿಸಲು, ವರ್ಗಾವಣೆ ಮಾಡಲು, ಹಿಂಬರಹ ಮಾಡಲು, ಮುರಿಸಲು ಅಥವಾ ಅನ್ಯಥಾ ವ್ಯವಹರಿಸಲು ಮತ್ತು ಅದರ ಸೂಕ್ತ ವಿಮೋಚನೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು;

(ಎಫ್) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಮಾರಾಟ ಮಾಡಲು, ವರ್ಗಾವಣೆ ಮಾಡಲು ಅಥವಾ ಅನ್ಯಥಾ ನಗದಾಗಿ ಪರಿವರ್ತಿಸಲು ಅಥವಾ ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಸ್ವತ್ತನ್ನು, ಸಾರ್ವಜನಿಕ ಹರಾಜಿನ ಮೂಲಕ ಅಥವಾ ವಿಶೇಷ ನ್ಯಾಯಾಲಯದ ಪೂರ್ವಾನುಮೋದನೆಯೊಡನೆ ಖಾಸಗಿ ವ್ಯವಸ್ಥೆಗಳ ಮೂಲಕ ಮಾರಾಟ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಸ್ವತ್ತಿನಲ್ಲಿರುವ ನಾಶ ಹೊಂದುವ ವಸ್ತುಗಳನ್ನು, ಸಕ್ಷಮ ಪ್ರಾಧಿಕಾರಿಯು ಸೂಕ್ತವೆಂದು ಭಾವಿಸಿದಷ್ಟು ಬೇಗನೆ ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡತಕ್ಕದ್ದು.

(ಜಿ) ವಿಶೇಷ ನ್ಯಾಯಾಲಯದ ಆದೇಶದ ಅನುಸಾರವಾಗಿ ಬ್ಯಾಂಕ್ ಖಾತೆಗಳಿಂದ ಸಂದಾಯಗಳನ್ನು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು; ಮತ್ತು

(ಎಚ್) ಹಣಕಾಸು ಸಂಸ್ಥೆಯ ಸ್ವತ್ತುಗಳ ತ್ವರಿತ ನಗದು ಪರಿವರ್ತನೆಗಾಗಿ ಅವಶ್ಯಕವಾಗಬಹುದಾದ ಎಲ್ಲ ಮತ್ತು ಪ್ರತಿಯೊಂದು ಕಾರ್ಯವನ್ನು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ "ಹಣಕಾಸು ಸಂಸ್ಥೆ", ಎಂಬ ಪದಾವಳಿಯು ಸದರಿ ಸಂಸ್ಥೆಯ ನಿರ್ದೇಶಕರು, ಪಾಲುದಾರರು, ಪ್ರವರ್ತಕರು, ವ್ಯವಸ್ಥಾಪಕರು ಅಥವಾ ಸದಸ್ಯರನ್ನು ಅಥವಾ 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಅಥವಾ ಆಸ್ತಿಯನ್ನು ಜಪ್ತಿ ಮಾಡಲಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**7. ಸ್ವತ್ತುಗಳ ಮತ್ತು ಠೇವಣಿಗಳ ಹೊಣೆಗಳ ನಿರ್ಧರಣೆ.–** (1) ತನ್ನ ನೇಮಕದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಸಕ್ಷಮ ಪ್ರಾಧಿಕಾರಿಯು, ಹಣಕಾಸು ಸಂಸ್ಥೆಯ ಠೇವಣಿ ಹೊಣೆಗಳ ಮತ್ತು ಸ್ವತ್ತುಗಳ ನಿರ್ಧರಣೆ ಮಾಡತಕ್ಕದ್ದು ಮತ್ತು ಅದರ ಬಗ್ಗೆ ಒಂದು ವರದಿಯನ್ನು ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು.

(2) ಆ ತರುವಾಯ ಸಕ್ಷಮ ಪ್ರಾಧಿಕಾರಿಯು, ಭದ್ರತೆ ಪಡೆದ ಸಾಲ ಕೊಟ್ಟವರು ಯಾರಾದರೂ ಇದ್ದರೆ, ಅವರಿಂದ ಮತ್ತು ಹಣಕಾಸು ಸಂಸ್ಥೆಗಳ ಠೇವಣಿದಾರರಿಂದ, ಅವರು ತಮ್ಮ ಕ್ಲೇಮುಗಳನ್ನು ಸ್ಥಾಪಿಸಲು ಸೂಕ್ತ ರುಜುವಾತಿನೊಡನೆ ಕ್ಲೇಮುಗಳನ್ನು ಸಲ್ಲಿಸುವಂತೆ ಆಹ್ವಾನಿಸಿ ವೈಯಕ್ತಿಕವಾಗಿ ಅಥವಾ ಪರಿಣಾಮಕಾರಿಯಾದ ಪ್ರಸಾರ ಮಾಧ್ಯಮದ ಮೂಲಕ ನೋಟೀಸನ್ನು ನೀಡತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿ ಕ್ಲೇಮುದಾರರಿಗೆ ಕಳುಹಿಸಲಾದ ಅಥವಾ ಜಾರಿಗೊಳಿಸಲಾಗಿದೆ ಎಂದು ಭಾವಿಸಲಾದ, ಪ್ರತಿಯೊಂದು ನೋಟೀಸಿನಲ್ಲಿ, ನೋಟೀಸಿನ ದಿನಾಂಕದಿಂದ ಒಂದು ತಿಂಗಳ ಅವಧಿ ಮುಕ್ತಾಯವಾಗುವ ಮೊದಲು, ವಿವರಣ ಪಟ್ಟಿಯನ್ನು ಅಥವಾ ಕ್ಲೇಮನ್ನು ಸಕ್ಷಮ ಪ್ರಾಧಿಕಾರಿಗೆ ಕಳುಹಿಸದಿದ್ದರೆ, ಕ್ಲೇಮುಗಳನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯ ಮಾಡಲು ಹಕ್ಕುಳ್ಳ ಕ್ಲೇಮು ಆಗಿ ಪರಿಗಣಿಸಲಾಗುವುದಿಲ್ಲವೆಂದು ತಿಳಿಸತಕ್ಕದ್ದು.

(4) ಭದ್ರತೆ ಪಡೆದ ಸಾಲ ಕೊಟ್ಟವನಿಗೆ ಕಳುಹಿಸಿದ ಪ್ರತಿಯೊಂದು ನೋಟೀಸಿನಲ್ಲಿ, ನೋಟೀಸಿನ ದಿನಾಂಕದಿಂದ ಒಂದು ತಿಂಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಲು ಅಗತ್ಯಪಡಿಸತಕ್ಕದ್ದು ಮತ್ತು ಅಂಥ ನೋಟೀಸಿನಲ್ಲಿ, ಭದ್ರತಾ ಪತ್ರದ ಮೌಲ್ಯಮಾಪನದೊಡನೆ ಕ್ಲೇಮಿನ ವಿವರಣ ಪತ್ರವನ್ನು ಸಕ್ಷಮ ಪ್ರಾಧಿಕಾರಿಗೆ ಕಳುಹಿಸದಿದ್ದರೆ, ಸಕ್ಷಮ ಪ್ರಾಧಿಕಾರಿಯು ಸ್ವತಃ ಭದ್ರತಾ ಪತ್ರದ ಮೌಲ್ಯಮಾಪನ ಮಾಡುತ್ತಾರೆ ಮತ್ತು ಹಾಗೆ ಮಾಡಿದ ಮೌಲ್ಯಮಾಪನಕ್ಕೆ, ಅಂಥ ಭದ್ರತೆ ಪಡೆದ ಸಾಲ ಕೊಟ್ಟವರು ಬದ್ಧರಾಗಿರತಕ್ಕದ್ದು ಎಂಬುದನ್ನೂ ತಿಳಿಸತಕ್ಕದ್ದು.

(5) ಕ್ಲೇಮುದಾರನು (4)ನೇ ಉಪ ಪ್ರಕರಣದ ಅನುಸಾರ ನೋಟೀಸನ್ನು ಪಾಲಿಸಲು ತಪ್ಪಿದರೆ, ಸಕ್ಷಮ ಪ್ರಾಧಿಕಾರಿಯು, ತನ್ನ ಅತ್ಯುತ್ತಮ ವಿವೇಚನೆಯಂತೆ ಅಂಥ ಭದ್ರತಾ ಪತ್ರದ ಮೌಲ್ಯಮಾಪನ ಮಾಡತಕ್ಕದ್ದು.

**8. ಸಕ್ಷಮ ಪ್ರಾಧಿಕಾರಿಯಿಂದ ವರದಿ.–** 7ನೇ ಪ್ರಕರಣದ ಅಡಿಯಲ್ಲಿ ವರದಿಯನ್ನು ಸಲ್ಲಿಸಿದ ಮೇಲೆ ಸಕ್ಷಮ ಪ್ರಾಧಿಕಾರಿಯು, ವಸೂಲ್ಮಾಡಲಾದ ಹಣದಿಂದ ಠೇವಣಿದಾರರಿಗೆ ಸಂದಾಯ ಮಾಡುವುದಕ್ಕಾಗಿ

ಅನುಮತಿ ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಅಂಥ ಅರ್ಜಿಯನ್ನು ಸಲ್ಲಿಸುವಾಗ, ಸಕ್ಷಮ ಪ್ರಾಧಿಕಾರವು, ಠೇವಣಿದಾರರಿಗೆ ಹೊಣೆಗಳ ಮತ್ತು ಇತರ ಹೊಣೆಗಳ ನಿರ್ಧರಣೆ ಮಾಡತಕ್ಕದ್ದು ಮತ್ತು ವಸೂಲ್ಮಾಡಲಾದ ಹಣದಿಂದ ಸಂಪೂರ್ಣವಾಗಿ ಹೊಣೆಯನ್ನು ಭರಿಸಲು ಸಾಧ್ಯವಿಲ್ಲದಿದ್ದ ಸಂದರ್ಭದಲ್ಲಿ ಠೇವಣಿದಾರರಿಗೆ ಸಂದಾಯ ಮಾಡುವುದಕ್ಕಾಗಿ ವಿಶೇಷ ನ್ಯಾಯಾಲಯದ ಅನುಮತಿ ಕೋರತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಆದೇಶಕ್ಕನುಸಾರ ಹಣದ ಬಟವಾಡೆ ಮಾಡತಕ್ಕದ್ದು.

## ಅಧ್ಯಾಯ - III

**9. ಹಣಕಾಸು ಸಂಸ್ಥೆಯಿಂದ ವಂಚನೋದ್ದೇಶದ ತಪ್ಪುವಿಕೆ.-** ಯಾವುದೇ ಹಣಕಾಸು ಸಂಸ್ಥೆಯು, ವಾಗ್ದಾನ ಮಾಡಿದಂತೆ ಅವಧಿಯು ಪೂರ್ಣಗೊಂಡ ಮೇಲೆ ಬಡ್ಡಿ, ಬೋನಸ್, ಲಾಭದ ರೂಪದಲ್ಲಿ ಅಥವಾ ಇತರ ಯಾವುದೇ ರೂಪದಲ್ಲಿ ಯಾವುದೇ ಪ್ರಯೋಜನದ ಜೊತೆಗೆ ಠೇವಣಿಯ ಯಾವುದೇ ಮರುಸಂದಾಯ ಮಾಡಲು ವಂಚನೋದ್ದೇಶದಿಂದ ತಪ್ಪಿದರೆ ಅಥವಾ ಠೇವಣಿಗೆ ಪ್ರತಿಯಾಗಿ ಭರವಸೆ ನೀಡಿದಂತೆ ಸೇವೆ ಸಲ್ಲಿಸಲು ಮೋಸದಿಂದ ತಪ್ಪಿದರೆ, ಪ್ರವರ್ತಕ, ನಿರ್ದೇಶಕ, ಪಾಲುದಾರ, ವ್ಯವಸ್ಥಾಪಕನೂ ಸೇರಿದಂತೆ ಪ್ರತಿಯೊಬ್ಬ ವ್ಯಕ್ತಿ ಅಥವಾ ಅಂಥ ಹಣಕಾಸು ಸಂಸ್ಥೆಯ ವ್ಯವಹಾರ ಅಥವಾ ಕಾರ್ಯಕಲಾಪಗಳ ವ್ಯವಸ್ಥಾಪನೆಗೆ ಅಥವಾ ನಡೆಸುವುದಕ್ಕೆ ಹೊಣೆಗಾರನಾದ ಯಾವೊಬ್ಬ ಇತರ ವ್ಯಕ್ತಿ ಅಥವಾ ನೌಕರನು, ದೋಷಸಿದ್ಧಿಯಾದ ತರುವಾಯ, ಆರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಹಣಕಾಸು ಸಂಸ್ಥೆಯು ಸಹ ಐದು ಲಕ್ಷ ರೂಪಾಯಿಗಳಿಗೆ ಸಮನಾದ ಮೊಬಲಗಿನವರೆಗೆ ವಿಸ್ತರಿಸಬಹುದಾದ ಅಥವಾ ಅಂಥ ಠೇವಣಿಗಳನ್ನು ಮೊತ್ತದ ರೂಪದಲ್ಲಿ ಹೇಳಬಹುದಾಗಿದ್ದಲ್ಲಿ, ಹಾಗೆ ಸಂದಾಯ ಮಾಡಲು ತಪ್ಪಿದ ಮೊತ್ತದ ಎರಡುಪಟ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

ಪರಂತು, ವಿಶೇಷ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ವಿಶೇಷ ಮತ್ತು ಸಾಕಷ್ಟು ಕಾರಣಗಳನ್ನು ದಾಖಲಿಸದೇ ಇದ್ದಲ್ಲಿ ಕಾರಾವಾಸವು ಮೂರು ವರ್ಷಗಳಿಗೆ ಕಡಿಮೆ ಇರತಕ್ಕದ್ದಲ್ಲ ಮತ್ತು ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ಜುಲ್ಮಾನೆಯು, ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇರತಕ್ಕದ್ದಲ್ಲ ಮತ್ತು ಅಂಥ ಹಣಕಾಸು ಸಂಸ್ಥೆಯ ವಿರುದ್ಧ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರತಕ್ಕದ್ದಲ್ಲ.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಗೆ ಅಕ್ರಮ ಲಾಭ ಅಥವಾ ಇನ್ನೊಬ್ಬ ವ್ಯಕ್ತಿಗೆ ಅಕ್ರಮ ಹಾನಿ ಉಂಟು ಮಾಡುವ ಉದ್ದೇಶದಿಂದ ಒಂದು ಹಣಕಾಸು ಸಂಸ್ಥೆಯು, ತಾನು ವಾಗ್ದಾನ ಮಾಡಿದಂತೆ, ಬಡ್ಡಿ, ಬೋನಸ್, ಲಾಭದ ರೂಪದಲ್ಲಿ, ಅಥವಾ ಇತರ ಯಾವುದೇ ಅಂಥ ರೂಪದ ಪ್ರಯೋಜನಗಳ ಜೊತೆಗೆ ಅಂಥ ಠೇವಣಿಯನ್ನು ಮರುಸಂದಾಯ ಮಾಡಲು ತಪ್ಪಿದರೆ ಅಥವಾ ಅಂಥ ಠೇವಣಿಗೆ ಪ್ರತಿಯಾಗಿ ವಾಗ್ದಾನ ಮಾಡಿದ ಯಾವುದೇ ನಿರ್ದಿಷ್ಟ ಸೇವೆಯನ್ನು ಒದಗಿಸಲು ತಪ್ಪಿದರೆ ಅಥವಾ ಅಂಥ ಠೇವಣಿಯನ್ನು ಸ್ವೀಕರಿಸುವಾಗ ಕಾರ್ಯಸಾಧ್ಯವಲ್ಲದ ಅಥವಾ ವಾಣಿಜ್ಯ ದೃಷ್ಟಿಯಿಂದ

ಊರ್ಜಿತವಾಗುವಂತಹವು ಅಲ್ಲದ ವಾಗ್ದಾನಗಳನ್ನು ಮಾಡಿದ ಕಾರಣದಿಂದ ಉಂಟಾದ, ಅಂಥ ತಪ್ಪುಗಳನ್ನು ಅಥವಾ ಠೇವಣಿಗಳಿಂದ ಬಂದ ಹಣವನ್ನು ಅಥವಾ ಆರ್ಜಿಸಿದ ಸ್ವತ್ತನ್ನು ಅಗತ್ಯ ಬಿದ್ದಾಗ ಹಣವನ್ನು ಮತ್ತೆ ಪಡೆದುಕೊಳ್ಳುವುದು ಸಾಧ್ಯವಾಗದಂತಹ ಅಂತರ್ನಿಹಿತ ಅಪಾಯವಿರುವಂತಹ ರೀತಿಯಲ್ಲಿ ತೊಡಗಿಸಿದ ಕಾರಣದಿಂದ ಮರು ಸಂದಾಯ ಮಾಡಲು ತಪ್ಪಿದಲ್ಲಿ ವಂಚನೋದ್ದೇಶದಿಂದ ಹಾಗೆ ಸಂದಾಯ ಮಾಡಲು ತಪ್ಪಿದೆ ಎಂದು ಅಥವಾ ನಿರ್ದಿಷ್ಟ ಸೇವೆಯನ್ನು ಸಲ್ಲಿಸಲು ವಿಫಲವಾಗಿದೆ ಎಂದು ಭಾವಿಸತಕ್ಕದ್ದು.

## ಅಧ್ಯಾಯ - IV

**10. ವಿಶೇಷ ನ್ಯಾಯಾಲಯ.-** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಹಮತಿಯೊಡನೆ ಅಧಿಸೂಚನೆಯ ಮೂಲಕ ಅಂಥ ಪ್ರದೇಶಕ್ಕಾಗಿ ಅಥವಾ ಪ್ರದೇಶಗಳಿಗಾಗಿ ಅಥವಾ ಪ್ರಕರಣಗಳ ಅಂಥ ವರ್ಗಕ್ಕಾಗಿ ಅಥವಾ ವರ್ಗಗಳಿಗಾಗಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ದರ್ಜೆಗೆ ಕಡಿಮೆಯಿಲ್ಲದ ಒಬ್ಬರು ನ್ಯಾಯಾಧೀಶರನ್ನುಳ್ಳ ಒಂದು ಅಥವಾ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ರಚಿಸಬಹುದು.

(2) ವಿಶೇಷ ನ್ಯಾಯಾಲಯದ ಹೊರತಾಗಿ ಪ್ರೆಸಿಡೆನ್ಸಿ ಟೌನ್‌ಗಳ ದಿವಾಳಿತನ ಅಧಿನಿಯಮ, 1909ರ (1909ರ ಅಧಿನಿಯಮ 3) ಮತ್ತು ಪ್ರಾಂತೀಯ ದಿವಾಳಿತನ ಅಧಿನಿಯಮ, 1920ರ (1920ರ ಅಧಿನಿಯಮ 5) ಅಡಿಯಲ್ಲಿ ರಚಿತವಾದ ನ್ಯಾಯಾಲಯವೂ ಒಳಗೊಂಡಂತೆ ಇತರ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಯಾವುದೇ ವಿಷಯದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಅಧಿಸೂಚನೆಯ ದಿನಾಂಕದಿಂದ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯು ವಿಶೇಷ ನ್ಯಾಯಾಲಯಗಳಿಗೆ ವರ್ಗಾಯಿತವಾಗತಕ್ಕದ್ದು.

**11. ಸ್ವತ್ತುಗಳ ನಗದು ಪರಿವರ್ತನೆ ಮತ್ತು ಠೇವಣಿದಾರರಿಗೆ ಸಂದಾಯಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು.-** (1) ವಿಶೇಷ ನ್ಯಾಯಾಲಯವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ವಿಶೇಷ ನ್ಯಾಯಾಲಯವು,

(ಎ) ಈ ಅಧಿನಿಯಮದ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತಹ, ನಿರ್ದೇಶನವನ್ನು ಸಕ್ಷಮ ಪ್ರಾಧಿಕಾರಕ್ಕೆ ನೀಡಬಹುದು;

(ಬಿ) ಅನೇಕ ಸಾಲಗಾರರಿಂದ ಹಣಕಾಸು ಸಂಸ್ಥೆಗೆ ಬರಬೇಕಾದ ಬಾಕಿಗಳ ವಿವರಣ ಪಟ್ಟಿಯನ್ನು, ಹಣಕಾಸು ಸಂಸ್ಥೆಯ ಸ್ವತ್ತುಗಳ ಮೌಲ್ಯದ ನಿರ್ಧರಣೆಯನ್ನು ಅನುಮೋದಿಸಬಹುದು ಮತ್ತು ಠೇವಣಿದಾರರ ಮತ್ತು ಅವರವರ ಬಾಕಿಗಳ ಪಟ್ಟಿಯನ್ನು ಅಂತಿಮಗೊಳಿಸಬಹುದು; 1 2

(ಸಿ) ಹಣಕಾಸು ಸಂಸ್ಥೆಗೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುವೇ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳಲು ಮತ್ತು ಜಪ್ತಿ ಮಾಡಿದ ಸ್ವತ್ತುಗಳ ವರ್ಗಾವಣೆ ಮಾಡಲು ಅಥವಾ ನಗದಾಗಿ ಪರಿವರ್ತಿಸಲು ಅಥವಾ ಜಪ್ತಿ ಮಾಡಿದ ಸ್ವತ್ತನ್ನು ತಾನು ಸೂಕ್ತವೆಂದು ಭಾವಿಸುವಂತೆ ಅಥವಾ ಸ್ವತ್ತುಗಳ ಸ್ವರೂಪವನ್ನವಲಂಬಿಸಿ ಸಾರ್ವಜನಿಕ ಹರಾಜಿನ ಅಥವಾ ಖಾಸಗಿ ಮಾರಾಟದ ಮೂಲಕ ಮಾರಾಟಮಾಡಲು ಮತ್ತು ಮಾರಾಟದಿಂದ ದೊರೆತ ಉತ್ಪನ್ನವನ್ನು ಬ್ಯಾಂಕ್ ಖಾತೆಗಳಲ್ಲಿ ಜಮಾ ಮಾಡಲು ಸಕ್ಷಮ ಪ್ರಾಧಿಕಾರಿಗೆ ನಿರ್ದೇಶಿಸಬಹುದು;

(ಡಿ) ಹಣಕಾಸು ಸಂಸ್ಥೆಯ ಸ್ವತ್ತುಗಳ ಸ್ವಾಧೀನತೆ ತೆಗೆದುಕೊಳ್ಳುವುದಕ್ಕಾಗಿ ಮತ್ತು ನಗದಾಗಿ ಪರಿವರ್ತಿಸುವುದಕ್ಕಾಗಿ, ಸಕ್ಷಮ ಪ್ರಾಧಿಕಾರಿಯು ವಹಿಸುವ ಅವಶ್ಯಕ ವೆಚ್ಚಗಳನ್ನು ಅನುಮೋದಿಸಬಹುದು;

(ಇ) 8ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ಠೇವಣಿದಾರರಿಗೆ ಸಂದಾಯ ಮಾಡಲು ಆದೇಶ ಮಾಡಬಹುದು ಅಥವಾ ಹಾಗೆ ನಗದಾಗಿ ಪರಿವರ್ತಿತ ಹಣವು ಸಮಗ್ರ ಠೇವಣಿಯ ಹೊಣೆಯನ್ನು ಭರಿಸಲು ಸಾಕಷ್ಟಾಗಿರದಿದ್ದ ಸಂದರ್ಭದಲ್ಲಿ ಠೇವಣಿದಾರರಿಗೆ ದಾಮಾಷಾ ಪ್ರಮಾಣದಲ್ಲಿ ಸಂದಾಯ ಮಾಡುವುದಕ್ಕಾಗಿ ಆದೇಶ ಮಾಡಬಹುದು; ಮತ್ತು

(ಎಫ್) ಕಂಪೆನಿಯ ಸ್ವತ್ತುಗಳ ನಗದು ಪರಿವರ್ತನೆಗೆ ಮತ್ತು ಹಣಕಾಸು ಸಂಸ್ಥೆಯ ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕಾಗಿ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾವುದೇ ವಿಷಯದ ಅಥವಾ ವಿವಾದಾಂಶದ ಮೇಲೆ ವಿಶೇಷ ನ್ಯಾಯಾಲಯವು ಸೂಕ್ತವೆಂದು ಭಾವಿಸುವ ಯಾವುದೇ ಆದೇಶವನ್ನು ಹೊರಡಿಸಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, 'ಹಣಕಾಸು ಸಂಸ್ಥೆ' ಎಂಬ ಪದಾವಳಿಯು, ಸದರಿ ಸಂಸ್ಥೆಯ ನಿರ್ದೇಶಕರು, ಪಾಲುದಾರರು, ಪ್ರವರ್ತಕರು, ವ್ಯವಸ್ಥಾಪಕರು ಅಥವಾ ಸದಸ್ಯರನ್ನು ಅಥವಾ 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಅಥವಾ ಆಸ್ತಿಯನ್ನು ಜಪ್ತಿ ಮಾಡಲಾಗಿದೆಯೋ ಆ ಯಾವೊಬ್ಬ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**12. ಜಪ್ತಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಅಧಿಕಾರಗಳು.–** (1) 5ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ವಿಶೇಷ ನ್ಯಾಯಾಲಯವು, 3ನೇ ಪ್ರಕರಣದ ಅಡಿಯಲ್ಲಿ ಯಾರ ಸ್ವತ್ತನ್ನು ಜಪ್ತಿ ಮಾಡಿ ಸಕ್ಷಮ ಪ್ರಾಧಿಕಾರದಲ್ಲಿ ನಿಹಿತಗೊಳಿಸಲಾಗಿದೆಯೋ ಆ ಹಣಕಾಸು ಸಂಸ್ಥೆಗೆ ಮತ್ತು ಯಾವನೇ ಇತರ ವ್ಯಕ್ತಿ ಇದ್ದರೆ ಅವನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮೊದಲು ಜಪ್ತಿ ಆದೇಶವನ್ನು ಏಕೆ ನಿರುಪಾಧಿಕಗೊಳಿಸತಕ್ಕದ್ದಲ್ಲವೆಂಬ ಬಗ್ಗೆ ಕಾರಣವನ್ನು ತೋರಿಸಲು ಅವರನ್ನು ಕೋರಿ, ಅರ್ಜಿಯ ಪ್ರತಿಗಳು ಮತ್ತು ಅಫಿದಾವಿತ್ತುಗಳು ಮತ್ತು ಸಾಕ್ಷ್ಯದ ದಾಖಲೆ ಯಾವುದಾದರೂ ಇದ್ದರೆ ಅವುಗಳ ಸಹಿತ ಒಂದು ನೋಟೀಸನ್ನು ನೀಡತಕ್ಕದ್ದು.

(2) ವಿಶೇಷ ನ್ಯಾಯಾಲಯವು, ಹಣಕಾಸು ಸಂಸ್ಥೆಯ ಅಥವಾ (1)ನೇ ಉಪ ಪ್ರಕರಣದ ಅಡಿಯಲ್ಲಿ ಯಾರಿಗೆ ನೋಟೀಸನ್ನು ನೀಡಲಾಗಿದೆಯೋ ಆ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಅಥವಾ ಹಕ್ಕು

ಇದೆಯೆಂದು ಅಥವಾ ಇರುವ ಕ್ಲೇಮು ಮಾಡುವ ಸಂಭವವಿದೆ ಎಂದು ತನಗೆ ಮನವಿಗಳನ್ನು ಸಲ್ಲಿಸಿದ್ದ ಎಲ್ಲಾ ವ್ಯಕ್ತಿಗಳಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ, ದಿನಾಂಕದಂದೇ ಹಾಜರಾಗುವಂತೆ ಮತ್ತು ಸ್ವತ್ತಿನ ಅಥವಾ ಅದರ ಯಾವುದೇ ಭಾಗದ ಜಪ್ತಿಗೆ ಸಂಬಂಧಿಸಿದಂತೆ ಅಂಥ ಸ್ವತ್ತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅವನು ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಆಧಾರದ ಮೇಲೆ, ಯಾವುದೇ ಆಕ್ಷೇಪಣೆ ಮಾಡಲು ಇಚ್ಛಿಸಿದರೆ, ಹಾಗೆ ಮಾಡುವಂತೆ ಕೋರುವ ನೋಟೀಸನ್ನು ಸಹ ನೀಡತಕ್ಕದ್ದು.

(3) ಜಪ್ತಿ ಮಾಡಲಾದ ಸ್ವತ್ತಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾವೊಬ್ಬ ವ್ಯಕ್ತಿಯು, ಈ ಪ್ರಕರಣದ ಅಡಿಯಲ್ಲಿ ನೋಟೀಸನ್ನು ಜಾರಿಗೊಳಿಸಿರದಿದ್ದಾಗ್ಯೂ, (4)ನೇ ಉಪ−−ಪ್ರಕರಣದ ಅಥವಾ (6)ನೇ ಉಪ −ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಮೇಲ್ಕಂಡಂತೆ ವಿಶೇಷ ನ್ಯಾಯಾಲಯಕ್ಕೆ ಆಕ್ಷೇಪಣೆಯನ್ನು ಸಲ್ಲಿಸಬಹುದು.

(4) ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಮೊದಲು ಯಾವುದೇ ಕಾರಣವನ್ನು ತೋರಿಸದಿದ್ದರೆ ಅಥವಾ ಯಾವುವೇ ಆಕ್ಷೇಪಣೆಗಳನ್ನು ಮಾಡದಿದ್ದರೆ, ವಿಶೇಷ ನ್ಯಾಯಾಲಯವು ಕೂಡಲೇ ಜಪ್ತಿಯ ಆದೇಶವನ್ನು ನಿರುಪಾಧಿಕಗೊಳಿಸುವ ಆದೇಶವನ್ನು ಮಾಡತಕ್ಕದ್ದು ಮತ್ತು ಜಪ್ತಿ ಮಾಡಲಾದ ಸ್ವತ್ತುಗಳನ್ನು ನಗದಾಗಿ ಪರಿವರ್ತಿಸಲು ಮತ್ತು ಜಪ್ತಿ ಮಾಡಲಾದ ಸ್ವತ್ತಿನ ನಗದು ಪರಿವರ್ತನೆಯಿಂದ ಬಂದ ಹಣವನ್ನು ಠೇವಣಿದಾರರಿಗೆ ಸಮನಾಗಿ ಹಂಚುವುದಕ್ಕೆ ಅವಶ್ಯಕವಾಗಬಹುದಾದಂಥ ನಿರ್ದೇಶನವನ್ನು ನೀಡತಕ್ಕದ್ದು.

ಅಲ್ಲದೇ ಸರ್ವೋಚ್ಚ ನ್ಯಾಯಾಲಯವು, ಅದೇ ತೀರ್ಪಿನಲ್ಲಿ ರಾಜ್ಯವು, ಪ್ರವೇಶಗಳು ನ್ಯಾಯಯುತವಾಗಿ ಮತ್ತು ಮೆರಿಟ್ ಆಧಾರದ ಮೇಲೆ ನಡೆಯುವಂತೆ ನೋಡಿಕೊಳ್ಳುವ ಸಲುವಾಗಿ ಹಾಗೂ ದುರಾಡಳಿತ ತಡೆಯುವ ಸಲುವಾಗಿ ಒಂದು ಕೇಂದ್ರೀಯ ಮತ್ತು ಏಕಗವಾಕ್ಷಿ ಕಾರ್ಯವಿಧಾನವನ್ನು ಏರ್ಪಡಿಸಿ ಪ್ರವೇಶವನ್ನು ನಿಯಂತ್ರಿಸಬಹುದೆಂದು, ಖಾಸಗಿ ಶಿಕ್ಷಣ ಸಂಸ್ಥೆಗಳು ಅನುಸರಿಸುವ ಪ್ರವೇಶ ಪ್ರಕ್ರಿಯೆಯು, ನ್ಯಾಯಾಲಯವು ನಿಯಮಿಸಿದ ಮೂರು ಬಗೆಯ ಪರೀಕ್ಷೆಗಳಲ್ಲಿ ಎಲ್ಲ ಅಥವಾ ಯಾವುದೊಂದನ್ನು ಯಶಸ್ವಿಗೊಳಿಸಲು

ವಿಫಲವಾದರೆ, ಆಗ ರಾಜ್ಯವು ಪ್ರವೇಶ ಪ್ರಕ್ರಿಯೆಯನ್ನು ತಾನೇ ಕೈಗೆತ್ತಿಕೊಂಡು ತನ್ನದೇ ಆದ ಪ್ರಕ್ರಿಯೆಯನ್ನು ಅಳವಡಿಸಬಹುದೆಂದು ತೀರ್ಮಾನ ನೀಡಿರುವುದರಿಂದ, ಮತ್ತು, ಸಂವಿಧಾನ (ತೊಂಬತ್ತೂರನೇ ತಿದ್ದುಪಡಿ) ಅಧಿನಿಯಮ, 2005 ರಲ್ಲಿ 15(5)ನೇ ಅನುಚ್ಛೇದದ ಅಡಿಯಲ್ಲಿ ಈ ಮುಂದಿನಂತೆ ಒಂದು ಉಪಬಂಧವನ್ನು ಕಲ್ಪಿಸಿರುವುದರಿಂದ, ಎಂದರೆ:–

"(5) ಈ ಅನುಚ್ಛೇದದಲ್ಲಿ ಅಥವಾ 19ನೇ ಅನುಚ್ಛೇದದ (1)ನೇ ಖಂಡದ (ಜಿ) ಉಪಖಂಡದಲ್ಲಿರುವು– ದಾವುದೂ, ರಾಜ್ಯವು ಯಾವುದೇ ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗಾಗಿ ವಿಶೇಷ ಉಪಬಂಧಗಳನ್ನು ರಚಿಸುವುದನ್ನು, ಅಂಥ ವಿಶೇಷ ಉಪಬಂಧಗಳು, 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲದ ರಾಜ್ಯದಿಂದ ಅನುದಾನ ಪಡೆಯುವ ಅಥವಾ ಅನುದಾನ ಪಡೆಯದ, ಖಾಸಗಿ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಶಿಕ್ಷಣ ಸಂಸ್ಥೆಗಳಿಗೆ ಅವರಿಗೆ ಪ್ರವೇಶ ನೀಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ತಡೆಯತಕ್ಕದ್ದಲ್ಲ."

ಮೇಲ್ಕಂಡ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಮತ್ತು ಯುಕ್ತವೆಂದು ಪರಿಗಣಿಸಲಾಗಿದೆ.

ಇದು ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರವೇಶ" ಎಂದರೆ, ಪ್ರವೇಶ ಕೇಂದ್ರದಲ್ಲಿ ಒದಗಿಸಿದ ಪ್ರವೇಶ;

(ಬಿ) "ಪ್ರವೇಶ ಕೇಂದ್ರ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಆಯ್ಕೆ ಮಾಡುವ ಮತ್ತು ಅವರಿಗೆ ಸೀಟು ಹಂಚಿಕೆ ಮಾಡುವ ಕೇಂದ್ರ;

(ಸಿ) "ಪ್ರವೇಶ ಮೇಲ್ವಿಚಾರಣಾ ಸಮಿತಿ" ಎಂದರೆ, ರಾಜ್ಯ ಸರ್ಕಾರವು, ಅನುದಾನ ಪಡೆಯದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವನ್ನು ನಿಯಂತ್ರಿಸುವುದಕ್ಕಾಗಿ 5ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಸಮಿತಿ;

(ಡಿ) "ಅನುದಾನಿತ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಆರ್ಥಿಕ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸುತ್ತಿರುವ ಒಂದು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆ ಮತ್ತು ಇದರಲ್ಲಿ ಅಂಥ ಆರ್ಥಿಕ ನೆರವನ್ನು ಅಥವಾ ಅನುದಾನವನ್ನು ಸ್ವೀಕರಿಸುತ್ತಿರುವ ಅಲ್ಪಸಂಖ್ಯಾತ ಮತ್ತು ಅಲ್ಪಸಂಖ್ಯಾತವಲ್ಲದ ಶಿಕ್ಷಣ ಸಂಸ್ಥೆಗಳೂ ಒಳಗೊಳ್ಳುತ್ತವೆ;

(ಇ) "ಸಾಮಾನ್ಯ ಪ್ರವೇಶ ಪರೀಕ್ಷೆ" ಎಂದರೆ, ಏಕಗವಾಕ್ಷಿ ಪ್ರಕ್ರಿಯೆಯ ಮೂಲಕ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ ಅಭ್ಯರ್ಥಿಗಳ ಮೆರಿಟ್ ಅನ್ನು ನಿರ್ಧರಿಸುವುದಕ್ಕಾಗಿ ನಡೆಸಲಾಗುವ ಪರೀಕ್ಷೆ ಮತ್ತು ತರುವಾಯದ ಕೇಂದ್ರೀಯ ಕೌನ್ಸೆಲಿಂಗ್ ವ್ಯವಸ್ಥೆ;

(ಎಫ್) "ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಒಂದು ಏಜನ್ಸಿ;

(ಜಿ) "ಶುಲ್ಕ ನಿಯಂತ್ರಣ ಸಮಿತಿ" ಎಂದರೆ, ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕಾಗಿ ಶುಲ್ಕವನ್ನು ನಿಗದಿಪಡಿಸಲು ಮತ್ತು ನಿಯಂತ್ರಿಸಲು 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಸಮಿತಿ;

(ಎಚ್) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(ಐ) "ಸರ್ಕಾರಿ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ಇರುವ ಎಲ್ಲ ಸೀಟುಗಳು, ಅನುದಾನಿತ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಷ್ಟು ಸಂಖ್ಯೆಯ ಸೀಟುಗಳು ಮತ್ತು ಅನುದಾನಿತವಲ್ಲದ, ಅಲ್ಪಸಂಖ್ಯಾತ ಹಾಗೂ ಅಲ್ಪಸಂಖ್ಯಾತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ನಡುವೆ ಮೂಡಿಬಂದ ಸಮ್ಮತಾಭಿಪ್ರಾಯಕ್ಕನುಸಾರವಾಗಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಂಥ ಸೀಟುಗಳು;

(ಜೆ) "ಸಾಮಾನ್ಯ ಪ್ರವರ್ಗದ ಸೀಟುಗಳು" ಎಂದರೆ, ಮೀಸಲು ಸೀಟುಗಳನ್ನು ಬಿಟ್ಟು ಉಳಿದ ಸೀಟುಗಳು;

(ಕೆ) "ಮಂಜೂರಾದ ಸೀಟುಗಳು" ಎಂದರೆ, ಒಂದು ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರತಿಯೊಂದು ವ್ಯಾಸಂಗ ಕ್ರಮಕ್ಕೆ, ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸಕ್ಷಮ ಪ್ರಾಧಿಕಾರವು ಮಂಜೂರ್ಮಾಡಿದ ಒಟ್ಟು ಸೀಟುಗಳು ಎಂದು ಅರ್ಥ.

(ಎಲ್) "ಅಲ್ಪಸಂಖ್ಯಾತ" ಎಂದರೆ, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ಎಂದರ್ಥ ಮತ್ತು ಅದು ಅವರುಗಳನ್ನು ಒಳಗೊಳ್ಳುತ್ತದೆ;

(ಎಮ್) "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ" ಎಂದರೆ, ನಿಯಮಿಸಬಹುದಾದಂಥ ಷರತ್ತುಗಳಿ ಗೊಳಪಟ್ಟು, ರಾಜ್ಯ ಸರ್ಕಾರವು ಹಾಗೆಂದು ಮಾನ್ಯತೆ ನೀಡಿದ ಅಥವಾ ಅಧಿಸೂಚಿಸಿದ ಶಿಕ್ಷಣ ಸಂಸ್ಥೆಗಳು;

(ಎನ್) "ಅನಿವಾಸಿ–ಭಾರತೀಯ" ಎಂದರೆ, ಭಾರತೀಯ ಮೂಲದ ತಂದೆ ಅಥವಾ ತಾಯಿಗೆ ಜನಿಸಿದ ಮತ್ತು ದೇಶದ ಹೊರಗೆ ವಾಸಿಸುತ್ತಿರುವ ಮತ್ತು ಸಮಾನ ಅರ್ಹತಾ ಪರೀಕ್ಷೆಯಲ್ಲಿ ಭಾರತದ ಹೊರಗೆ ಉತ್ತೀರ್ಣನಾದ ಒಬ್ಬ ವಿದ್ಯಾರ್ಥಿ;

(ಓ) "ಇತರ ಹಿಂದುಳಿದ ವರ್ಗಗಳು" ಎಂದರೆ, ರಾಜ್ಯಸರ್ಕಾರವು ಅಧಿಸೂಚಿಸಬಹುದಾದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗ ಅಥವಾ ವರ್ಗಗಳು;

(ಪಿ) "ವೃತ್ತಿ ಶಿಕ್ಷಣ ವ್ಯಾಸಂಗಕ್ರಮಗಳು" ಎಂದರೆ,–

(I) ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ

(i) ಬ್ಯಾಚುಲರ್ ಆಫ್ ಮೆಡಿಸಿನ್ ಮತ್ತು ಬ್ಯಾಚುಲರ್ ಆಫ್ ಸರ್ಜರಿಯ ಮತ್ತು

(ii) ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿಯ

– ಪ್ರಥಮ ವರ್ಷ

(II) ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಶಿಕ್ಷಣ ಸಂಸ್ಥೆಗಳಲ್ಲಿ,–

(i) ಬ್ಯಾಚುಲರ್ ಆಫ್ ಆಯುರ್ವೇದಿಕ್ ಮೆಡಿಸಿನ್ ಮತ್ತು ಸರ್ಜರಿ

(ii) ಬ್ಯಾಚುಲರ್ ಆಫ್ ಯುನಾನಿ ಮೆಡಿಸಿನ್ ಮತ್ತು ಸರ್ಜರಿ

(iii) ಬ್ಯಾಚುಲರ್ ಆಫ್ ನ್ಯಾಚುರೋಪತಿ ಮತ್ತು ಯೋಗ ಮತ್ತು

(iv) ಬ್ಯಾಚುಲರ್ ಆಫ್ ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿಯ

– ಪ್ರಥಮ ವರ್ಷ.

(III) ಇಂಜಿನಿಯರ್ ಸಂಸ್ಥೆಗಳಲ್ಲಿ,

(i) ಬ್ಯಾಚುಲರ್ ಆಫ್ ಇಂಜಿನಿಯರಿಂಗ್;

(ii) ಬ್ಯಾಚುಲರ್ ಆಫ್ ಟೆಕ್ನಾಲಜಿ ಮತ್ತು

(iii) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್‌ನಲ್ಲಿ,

– ಪೂರ್ಣಕಾಲಿಕ ಮತ್ತು ಅರೆಕಾಲಿಕ ವ್ಯಾಸಂಗ ಕ್ರಮಗಳೆರಡರಲ್ಲೂ, ಪ್ರಥಮ ವರ್ಷ– ಪ್ರಥಮ ಸೆಮಿಸ್ಟರ್ ಮತ್ತು ಡಿಪ್ಲೊಮಾದಾರರ ಸಂಬಂಧದಲ್ಲಿ ಎರಡನೇ ವರ್ಷ– ಮೂರನೇ ಸೆಮಿಸ್ಟರ್ (ಆರ್ಕಿಟೆಕ್ಚರ್ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರಥಮ ವರ್ಷ, ಪ್ರಥಮ ಸೆಮಿಸ್ಟರ್);

ಮತ್ತು ಇದರಲ್ಲಿ ಪದವಿ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ಯಾವುದೇ ಇತರ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳು ಮತ್ತು ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ, ಬಹುವಿಶಿಷ್ಟ ಜ್ಞಾನ ವ್ಯಾಸಂಗ ಕ್ರಮಗಳು ಒಳಗೊಳ್ಳುತ್ತವೆ.

(ಕ್ಯೂ) "ವೃತ್ತಿ ಶಿಕ್ಷಣ ಸಂಸ್ಥೆ" ಎಂದರೆ, ಸಕ್ಷಮ ಶಾಸನಬದ್ಧ ನಿಕಾಯವು ಅನುಮೋದಿಸಿದ ಅಥವಾ ಮಾನ್ಯತೆ ನೀಡಿದ ಪದವಿಯನ್ನು, ಡಿಪ್ಲೋಮಾವನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಒಂದು ಪ್ರಮಾಣ ಪತ್ರವನ್ನು ಪಡೆಯಲು ಅವಕಾಶಮಾಡಿಕೊಡುವಂಥ ವೃತ್ತಿ ಶಿಕ್ಷಣವನ್ನು ನೀಡುತ್ತಿರುವ ಅಥವಾ ವೃತ್ತಿ ಶಿಕ್ಷಣ ವ್ಯಾಸಂಗಕ್ರಮಗಳನ್ನು ನಡೆಸುತ್ತಿರುವ ಮತ್ತು ಒಂದು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಯಾವುದೇ ಹೆಸರನ್ನುಳ್ಳ ಒಂದು ಕಾಲೇಜು ಅಥವಾ ಶಾಲೆ ಅಥವಾ ಒಂದು ಸಂಸ್ಥೆ;

(ಆರ್) "ಅರ್ಹತಾ ಪರೀಕ್ಷೆ" ಎಂದರೆ, ನಿಯಮಿಸಬಹುದಾದಂಥ ಒಂದು ಪರೀಕ್ಷೆ;

(ಎಸ್) "ಮೀಸಲಿಟ್ಟ ಸೀಟುಗಳು" ಎಂದರೆ, ಸರ್ಕಾರಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳ ಘಟಕ ಕಾಲೇಜುಗಳಲ್ಲಿ, ಖಾಸಗಿ ಅನುದಾನಿತ ಮತ್ತು ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಟ್ಟ ಸೀಟುಗಳು;

(ಟಿ) "ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ, ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶ ನೀಡುವ ಸಮಿತಿ; ಮತ್ತು

(ಯು) "ಅನುದಾನಿತವಲ್ಲದ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸದ ಯಾವುದೇ ಖಾಸಗಿ ಆಡಳಿತವುಳ್ಳ ವೃತ್ತಿಶಿಕ್ಷಣ ಸಂಸ್ಥೆ.

(2) ಇದರಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮ, 1984 ರಲ್ಲಿ (1984ರ ಕರ್ನಾಟಕ ಅಧಿನಿಯಮ 37) ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ.–** (1) ಈ ಮುಂದಿನವರನ್ನೊಳಗೊಂಡ ಒಂದು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿ ಇರತಕ್ಕದ್ದು.

| | | |
|---|---|---|
| (ಎ) | ರಾಜ್ಯಸರ್ಕಾರವು ನಾಮನಿರ್ದೇಶಿಸಿದ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ– ಇವೆರಡರಲ್ಲೊಂದರ ಕುಲಪತಿ. | ಅಧ್ಯಕ್ಷರು |
| (ಬಿ) | ವೈದ್ಯಕೀಯ ಶಿಕ್ಷಣದ ನಿರ್ದೇಶಕರು | ಸದಸ್ಯರು |
| (ಸಿ) | ತಾಂತ್ರಿಕ ಶಿಕ್ಷಣದ ನಿರ್ದೇಶಕರು | ಸದಸ್ಯರು |
| (ಡಿ) | ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ | ನಿರ್ದೇಶಕರು ಸದಸ್ಯರು |
| (ಇ) | ಅನುದಾನಿತ ಅಥವಾ ಅನುದಾನಿತವಲ್ಲದ ಕಾಲೇಜುಗಳ ಪ್ರಾಂಶುಪಾಲರ ಪೈಕಿಯಿಂದ ಅಧ್ಯಕ್ಷರು ನಾಮನಿರ್ದೇಶಿಸುವ ಮೂವರು ವ್ಯಕ್ತಿಗಳು | |
| (i) | ವೈದ್ಯಕೀಯ ಕಾಲೇಜುಗಳಿಂದ ಒಬ್ಬರು. | |
| (ii) | ದಂತ ವೈದ್ಯಕೀಯ ಕಾಲೇಜುಗಳಿಂದ ಒಬ್ಬರು | |
| (iii) | ಇಂಜಿನಿಯರಿಂಗ್ ಕಾಲೇಜುಗಳಿಂದ ಒಬ್ಬರು. | ಸದಸ್ಯರು |
| (ಎಫ್) | ವಿಶೇಷ ಅಧಿಕಾರಿ, ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ | ಸದಸ್ಯ ಕಾರ್ಯದರ್ಶಿ |

ಪರಂತು, ಎಲ್ಲಾ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳು, ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟ ಸೀಟುಗಳ ಹೊರತಾಗಿ, ತಮ್ಮ ಎಲ್ಲ ಸೀಟುಗಳನ್ನು ರಾಜ್ಯ ಸಾಮಾನ್ಯ ಪ್ರವೇಶ

ಪರೀಕ್ಷಾ ಘಟಕದ ಮೂಲಕ ಭರ್ತಿಮಾಡಲು ಒಪ್ಪಿಕೊಂಡರೆ ಮತ್ತು ಆಯ್ಕೆ ಮಾಡಿಕೊಂಡರೆ, ಆಗ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ವೈದ್ಯಕೀಯ, ದಂತವೈದ್ಯ, ಇಂಜಿನಿಯರಿಂಗ್ ಮತ್ತು ಇತರ ಫ್ಯಾಕಲ್ಟಿಗಳಲ್ಲಿ ಶಿಕ್ಷಣ ನೀಡುತ್ತಿರುವ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದ ಪ್ರತಿನಿಧಿಗಳನ್ನು ಒಳಗೊಂಡಂತೆ, ತಾನು ಸೂಕ್ತವೆಂದು ಭಾವಿಸುವಷ್ಟು ಸಂಖ್ಯೆಯ ಸದಸ್ಯರು ಇರುವ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯನ್ನು ಪುನರ್‌ರಚಿಸಬಹುದು.

(2) ಸಮಿತಿಯು, ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸತಕ್ಕದ್ದು. ಪರೀಕ್ಷೆ ಸುಗಮವಾಗಿ ಆಗುವಂತೆ ನೋಡಿಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರವು, ಅಗತ್ಯವಾಗಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕಕ್ಕೆ ಒದಗಿಸತಕ್ಕದ್ದು.

(3) ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಸಮಿತಿಯು, ತಾನು ಸೂಕ್ತವೆಂದು ಭಾವಿಸುವಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(4) ಸಮಿತಿಯು, ನಿಯಮಿಸಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಂಥ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸತಕ್ಕದ್ದು.

(5) ನಾಮನಿರ್ದೇಶಿಸಲು ಸಕ್ಷಮವಾಗಿರುವ ಪ್ರಾಧಿಕಾರದ ಇಚ್ಛೆಗೊಳಪಟ್ಟು ಸಮಿತಿಯ ನಾಮನಿರ್ದೇಶಿತ ಸದಸ್ಯರು ತಮ್ಮ ನಾಮನಿರ್ದೇಶನದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು. ಯಾವುದೇ ಕಾರಣಕ್ಕಾಗಿ ಅದಕ್ಕೆ ಮೊದಲೇ ಯಾವುದೇ ಖಾಲಿ ಸ್ಥಾನ ಉಂಟಾದ ಸಂದರ್ಭದಲ್ಲಿ, ಅಂಥ ಖಾಲಿ ಸ್ಥಾನವನ್ನು, ಉಳಿದ ಅವಧಿಗಾಗಿ ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ತುಂಬತಕ್ಕದ್ದು. ಅಧಿಕಾರೇತರ ಸದಸ್ಯರು, ನಿಯಮಿಸಬಹುದಾದಂಥ ದರದಲ್ಲಿ ಉಪವೇಶನ ಶುಲ್ಕ ಮತ್ತು ಪ್ರಯಾಣ ಭತ್ಯಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(6) ಪ್ರತಿಯೊಂದು ಸರ್ಕಾರಿ ಸೀಟಿಗೆ ಪ್ರವೇಶವನ್ನು, ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಮೆರಿಟ್ ಆಧಾರದ ಮೇಲೆ ಹಾಗೂ ಆ ತರುವಾಯದ ಕೇಂದ್ರೀಯ ಕೌನ್ಸಿಲಿಂಗ್ ಮೂಲಕ ರಾಜ್ಯದ ಮೀಸಲಾತಿ ನೀತಿಗೊಳಪಟ್ಟು ಮಾಡತಕ್ಕದ್ದು.

**4. ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶದ ವಿಧಾನ.–** ಯಾವುದೇ ಒಂದು ವ್ಯಾಸಂಗ ವಿಷಯದಲ್ಲಿ ವೃತ್ತಿ ಶಿಕ್ಷಣವನ್ನು ನೀಡುತ್ತಿರುವಂಥ, ಎಲ್ಲಾ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳು ಅವು ಅಲ್ಪಸಂಖ್ಯಾತ ಸಂಸ್ಥೆಯಾಗಿರಲಿ ಅಥವಾ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಾಗಿರಲಿ, ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘಟನೆಯು, ಅಖಿಲ ಭಾರತ ಆಧಾರದ ಮೇಲೆ ರಾಜ್ಯ ಮಟ್ಟದಲ್ಲಿ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ, ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ಮೂಲಕವಾಗಿ, ಏಕಗವಾಕ್ಷಿ ವಿಧಾನವಾಗಿ 5ನೇ ಪ್ರಕರಣದ ಅಡಿಯಲ್ಲಿನ ಪ್ರವೇಶ ಮೇಲ್ವಿಚರಣಾ ಸಮಿತಿಯು ನಿರ್ಧರಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸಿ ತಮ್ಮ ಸಂಸ್ಥೆಗಳಿಗೆ ಪ್ರವೇಶವನ್ನು ನೀಡತಕ್ಕದ್ದು ಅಥವಾ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ಮೂಲಕ ಪ್ರವೇಶ ಪ್ರಕ್ರಿಯೆ ನಡೆಸಲು ಆಯ್ಕೆ ಮಾಡಿಕೊಂಡಲ್ಲಿ ಅದೇ ರೀತಿ ತಮ್ಮ ಸಂಸ್ಥೆಗಳಿಗೆ ಪ್ರವೇಶ ನೀಡಬಹುದು.

**5. ಪ್ರವೇಶ ಮೇಲ್ವಿಚಾರಣಾ ಸಮಿತಿ.–** (1) ಈ ಮುಂದಿನವರನ್ನು ಒಳಗೊಂಡ ಒಂದು ಪ್ರವೇಶ ಮೇಲ್ವಿಚಾರಣಾ

ಸಮಿತಿಯು ಇರತಕ್ಕದ್ದು,-

| | | |
|---|---|---|
| (ಎ) | ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯನ್ಯಾಯಾಧೀಶರು ನಾಮನಿರ್ದೇಶಿಸಿದ, ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು | ಅಧ್ಯಕ್ಷರು |
| (ಬಿ) | ವ್ಯಾಸಂಗ ವಿಷಯಗಳನ್ನು ಅವಲಂಬಿಸಿ ಸಂದರ್ಭಾನುಸಾರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಅಥವಾ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಕುಲಪತಿ | ಸದಸ್ಯರು |
| (ಸಿ) | ಅಧ್ಯಕ್ಷರು ನಾಮನಿರ್ದೇಶಿಸಿದ, ಸಂಬಂಧಪಟ್ಟ ಶಿಕ್ಷಣ ಕ್ಷೇತ್ರದಲ್ಲಿ ಪ್ರಸಿದ್ಧರಾದ ಒಬ್ಬ ವ್ಯಕ್ತಿ | ಸದಸ್ಯರು |
| (ಡಿ) | ಅಧ್ಯಕ್ಷರು ನಾಮನಿರ್ದೇಶಿಸಿದ, ಸಂದರ್ಭಾನುಸಾರ ಖ್ಯಾತ ವೈದ್ಯರಾಗಿರುವ ಅಥವಾ ಖ್ಯಾತ ಇಂಜಿನಿಯರ್ ಆಗಿರುವ ಒಬ್ಬ ವ್ಯಕ್ತಿ (ವ್ಯಾಸಂಗವಿಷಯ ಅವಲಂಬಿಸಿ) | ಸದಸ್ಯರು |
| (ಇ) | ವೈದ್ಯಶಿಕ್ಷಣ ಅಥವಾ ಸಂದರ್ಭಾನುಸಾರ ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ (ವ್ಯಾಸಂಗ ವಿಷಯವನ್ನು ಅವಲಂಬಿಸಿ) | ಸದಸ್ಯ ಕಾರ್ಯದರ್ಶಿ |

(2) ಯಾವುದೇ ಖಾಸಗಿಯಾದ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಯೊಡನೆ ಸಂಬಂಧಹೊಂದಿರುವ ಯಾವ ವ್ಯಕ್ತಿಯೂ, ಪ್ರವೇಶ ಮೇಲ್ವಿಚಾರಣಾ ಸಮಿತಿಯ ಸದಸ್ಯನಾಗಿರುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(3) ನಾಮನಿರ್ದೇಶಿಸಲು ಸಕ್ಷಮವಾಗಿರುವ ಪ್ರಾಧಿಕಾರದ ಇಚ್ಛೆಗೊಳಪಟ್ಟು ಸಮಿತಿಯ ನಾಮನಿರ್ದೇಶಿತ ಸದಸ್ಯರು ತಮ್ಮ ನಾಮನಿರ್ದೇಶನದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಅಧಿಕಾರ ಸ್ಥಾನದಲ್ಲಿರತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಅದಕ್ಕೆ ಮೊದಲೇ ಯಾವುದೇ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ, ಅಂಥ ಖಾಲಿಸ್ಥಾನವನ್ನು ಉಳಿದ ಅವಧಿಗಾಗಿ, ಮೇಲೆ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ತುಂಬತಕ್ಕದ್ದು. ಅಧಿಕಾರೇತರ ಸದಸ್ಯರು, ನಿಯಮಿಸಬಹುದಾದಂಥ ದರದಲ್ಲಿ ಉಪವೇಶನ ಶುಲ್ಕ ಮತ್ತು ಪ್ರಯಾಣ ಭತ್ಯೆಗಳನ್ನು ಪಡೆಯಲು ಅರ್ಹರಾಗಿರತಕ್ಕದ್ದು.

(4) ಪ್ರವೇಶ ಮೇಲ್ವಿಚಾರಣಾ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನ ಉಂಟಾದ ಕಾರಣ ಮಾತ್ರದಿಂದಲೇ ಅಥವಾ ಅದರ ರಚನೆಯಲ್ಲಿಯ ಯಾವುದೇ ದೋಷದಿಂದಲೇ ಅಸಿಂಧುವಾಗುತ್ತದೆಂದು ಭಾವಿಸತಕ್ಕದ್ದಲ್ಲ.

(5) ಪ್ರವೇಶ ಮೇಲ್ವಿಚಾರಣಾ ಸಮಿತಿಯ ಒಬ್ಬ ಸದಸ್ಯನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಂಥ

ಸದಸ್ಯನಾದವನಿಗೆ ತಕ್ಕದಾಗಿರದಂಥ ಯಾವುದೇ ಕೃತ್ಯವನ್ನು ಮಾಡಿದರೆ ಅವನ ಸದಸ್ಯತ್ವ ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವೊಬ್ಬ ಸದಸ್ಯನಿಗೂ, ಆತನು ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟಹೊರತು ಆತನನ್ನು ತೆಗೆದುಹಾಕತಕ್ಕದ್ದಲ್ಲ.

(6) ಅಧ್ಯಕ್ಷರು, ಪ್ರವೇಶ ಮೇಲ್ವಿಚಾರಣಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಸಮಿತಿಯು, ತಾನು ಸೂಕ್ತವೆಂದು ಭಾವಿಸುವಂಥ ತನ್ನದೇ ಆದ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬಹುದು.

(7) ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸಲು ಅನುಸರಿಸಬೇಕಾದ ಗುಣಮಟ್ಟವನ್ನು ಮತ್ತು ಕಾರ್ಯವಿಧಾನಗಳನ್ನು ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸತಕ್ಕದ್ದು ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ಕೇಂದ್ರೀಯ ಕೌನ್ಸಿಲಿಂಗ್ ಮತ್ತು ಪ್ರವೇಶಗಳನ್ನು ಮಾಡುವಾಗ ಅವನ್ನು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಶೋಷಣೆಯಾಗದಂಥ ರೀತಿಯಲ್ಲಿ ನಡೆಸುವಂತೆ ನೋಡಿಕೊಳ್ಳುವ ಉದ್ದೇಶದಿಂದ ಪ್ರವೇಶ ಮೇಲ್ವಿಚಾರಣಾ ಸಮಿತಿಯು ಅವುಗಳ ಅಧೀಕ್ಷಣೆ ಮತ್ತು ಮೇಲ್ವಿಚಾರಣೆಯನ್ನೂ ಮಾಡತಕ್ಕದ್ದು. ಇದು ಸುಗಮವಾಗಿ ಆಗುವಂತೆ ನೋಡಿಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರವು ಪ್ರವೇಶ ಮೇಲ್ವಿಚಾರಣಾ ಸಮಿತಿಗೆ ಅವಶ್ಯವಿರುವಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಮತ್ತು ನೌಕರರುಗಳನ್ನು ಒದಗಿಸತಕ್ಕದ್ದು.

(8) ಪ್ರವೇಶ ಮೇಲ್ವಿಚಾರಣಾ ಸಮಿತಿಯು ರೂಪಿಸಿದ ಕಾರ್ಯವಿಧಾನವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳ ಸಂಬಂಧದಲ್ಲಿ ಬಂದ ದೂರುಗಳ ವಿಚಾರಣೆಯನ್ನು ಸಹ ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಡೆಸಬಹುದು. ಪ್ರವೇಶ ಮೇಲ್ವಿಚಾರಣಾ ಸಮಿತಿಯು, ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ಸಾಕ್ಷ್ಯವನ್ನು ಮತ್ತು ವಿವರಣೆಯನ್ನು ಪಡೆದುಕೊಂಡ ತರುವಾಯ, ಪ್ರವೇಶಕ್ಕಾಗಿ ನಿಯಮಿಸಲಾದ ಕಾರ್ಯವಿಧಾನವನ್ನು ಉಲ್ಲಂಘಿಸಲಾಗಿದೆ ಎಂಬ ಅಥವಾ ಅನುದಾನಿತವಲ್ಲದ ಕಾಲೇಜುಗಳಿಂದ ಲೋಪದೋಷಗಳಾಗಿವೆ ಎಂಬ ತೀರ್ಮಾನಕ್ಕೆ ಬಂದರೆ, ಅದು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡತಕ್ಕದ್ದು – ಮತ್ತು ರಾಜ್ಯ ಸರ್ಕಾರವು, ಪ್ರತಿಯೊಂದು ಉಲ್ಲಂಘನೆಯ ಸಂದರ್ಭದಲ್ಲಿ 10 ಲಕ್ಷ ರೂಪಾಯಿಗಳ ವರೆಗೆ ಜುಲ್ಮಾನೆಯನ್ನು ವಿಧಿಸಲು ಮತ್ತು ಸಂಗ್ರಹಿಸಲು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಯಾವುದೇ ಕ್ರಮವನ್ನು ಕೈಗೊಳ್ಳಲು ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸಬಹುದು. ಅಂಥ ಜುಲ್ಮಾನೆಯನ್ನು ವಿಧಿಸುವುದು ವಿಶ್ವವಿದ್ಯಾನಿಲಯಕ್ಕೆ ಕಾನೂನು ಬದ್ಧವಾಗಿರತಕ್ಕದ್ದು. ಪ್ರವೇಶ ಮೇಲ್ವಿಚಾರಣಾ ಸಮಿತಿಯು ಅಂಥ ಪ್ರವೇಶಗಳನ್ನು, ಮೆರಿಟ್ ಅನ್ನು ಕಡೆಗಣಿಸಿ ಮಾಡಲಾಗಿರುವುದರಿಂದ ಅಸಿಂಧುವೆಂದು ಸಹ ಘೋಷಿಸಬಹುದು ಮತ್ತು ಅಂಥ ಪ್ರಕರಣದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯವು, ಅಂಥ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡತಕ್ಕದ್ದಲ್ಲ. ವಿಶ್ವವಿದ್ಯಾನಿಲಯವು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಅಂಥ ಸಂಸ್ಥೆಗಳಿಗೆ ಮಾಡಲಾದ ಎಲ್ಲ ಅಥವಾ ಯಾವುವೇ ಪ್ರವೇಶಗಳನ್ನು ಅನುಮೋದಿಸತಕ್ಕದ್ದಲ್ಲ.

(9) ಪ್ರವೇಶ ಮೇಲ್ವಿಚಾರಣಾ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಉದ್ಭವಿಸಬಹುದಾದ ಎಲ್ಲಾ ವಿಷಯಗಳ ಬಗ್ಗೆ ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರುತ್ತದೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆ ಮಾಡುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯವು ದಾವೆಯ

ಅಧಿವಿಚಾರಣೆಗೆ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿದಾರನಿಗೆ ಸಮನು ನೀಡುವುದು ಮತ್ತು ಹಾಜರಾತಿಗೆ ಒತ್ತಾಯಿಸುವುದು ಮತ್ತು ಪ್ರಮಾಣವಚನದ ಮೇಲೆ ಅವನ ವಿಚಾರಣೆ ನಡೆಸುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆಮಾಡುವುದು ಮತ್ತು ಹಾಜರುಪಡಿಸುವುದು;

(ಸಿ) ಅಫೀದಾವಿತ್ತಿನ ಮೇಲೆ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ವಿಚಾರಣೆ ಮಾಡುವುದಕ್ಕಾಗಿ ಯಾವುದೇ ಕಮೀಷನನ್ನು ಹೊರಡಿಸುವುದು.

(10) ಪ್ರವೇಶ ಮೇಲ್ವಿಚಾರಣಾ ಸಮಿತಿಯು, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಯಾವುದೇ ಸಂಸ್ಥೆಯು ಉಲ್ಲಂಘಿಸಿದೆ ಎಂದು ಮನಗಂಡರೆ ಅದು ಯುಕ್ತ ವಿಶ್ವವಿದ್ಯಾನಿಲಯಕ್ಕೆ ಅಥವಾ ಶಾಸನಬದ್ಧ ನಿಕಾಯಕ್ಕೆ, ಅಂಥ ಸಂಸ್ಥೆಯ ಸಂಯೋಜನೆ ಅಥವಾ ಮನ್ನಣೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಇತರೆ ಕ್ರಮವನ್ನು ಕೈಗೊಳ್ಳಲು ಶಿಫಾರಸ್ಸು ಮಾಡಬಹುದು.

(11) ಪ್ರವೇಶ ಮೇಲ್ವಿಚಾರಣಾ ಸಮಿತಿ ಅಥವಾ ಅದರಿಂದ ಅಧಿಕಾರ ಪಡೆದ ಯಾವೊಬ್ಬ ಅಧಿಕಾರಿಯು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘಗಳ ಮೂಲಕ ನಡೆಸಲಾಗುವ ಪ್ರವೇಶ ಪ್ರಕ್ರಿಯೆಗಳನ್ನು ಯಾವುದೇ ಹಂತದಲ್ಲಿ ಪರಿಶೀಲಿಸುವ ಅಧಿಕಾರ ಹೊಂದಿರತಕ್ಕದ್ದು. ಅಂಥ ಪರಿಶೀಲನೆ ನಡೆಸಿದಾಗಲೆಲ್ಲಾ, ಪ್ರವೇಶಗಳ ಮೇಲ್ವಿಚಾರಣಾ ಸಮಿತಿಯು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಪ್ರವೇಶ ಪ್ರಕ್ರಿಯೆಯು ಅನ್ಯಾಯವಾದದ್ದು, ಪಾರದರ್ಶಕವಲ್ಲದ್ದು ಮತ್ತು ಶೋಷಕವಾದದ್ದು ಅಥವಾ ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಿದ ಪ್ರಕಾರ್ಯದ ಉಲ್ಲಂಘನೆ ಮಾಡಿರುವಂಥದ್ದು ಎಂಬ ಅಭಿಪ್ರಾಯಕ್ಕೆ ಬಂದರೆ ಅದು, ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಅಂಥ ಕ್ರಮವು ಅನ್ಯಾಯವಾದದ್ದು ಅಥವಾ ಪಾರದರ್ಶಕವಲ್ಲದ್ದು ಅಥವಾ ಶೋಷಕವಾದದ್ದು ಹಾಗಾಗಿ ಅಸಿಂಧುವಾಗಿರುವುದಾಗಿ ಘೋಷಿಸಬಹುದು.

(12) (11)ನೇ ಉಪ-ಪ್ರಕರಣದ ಅಡಿಯಲ್ಲಿ ಅಂಥ ಘೋಷಣೆ ಮಾಡಿದ ಮೇಲೆ ಖಾಸಗಿ ಅನುದಾನಿತವಲ್ಲದ ಸಂಸ್ಥೆಗಳಿಗಾಗಿ ಪ್ರವೇಶ ಪ್ರಕ್ರಿಯೆಯನ್ನು ಅದೇ ಅರ್ಜಿದಾರರಿಗಾಗಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸತಕ್ಕದ್ದು. ಈ ಸಂಬಂಧದಲ್ಲಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ಭರಿಸಿದ ವೆಚ್ಚವನ್ನು ಕೌನ್ಸಿಲಿಂಗ್ ಮೂಲಕ ಸೀಟುಗಳ ಹಂಚಿಕೆ ಸಂದರ್ಭದಲ್ಲಿ ಆ ಸಂಘದಿಂದ ಅಥವಾ ಭೂ-ಕಂದಾಯದ ಬಾಕಿಗಳೆಂಬಂತೆ ವಸೂಲಿ ಮಾಡತಕ್ಕದ್ದು.

**6. ಶುಲ್ಕ ನಿಯಂತ್ರಣ ಸಮಿತಿ.-** (1) ಖಾಸಗಿ ಅನುದಾನರಹಿತ ಸಂಸ್ಥೆಗಳಲ್ಲಿ ವೃತ್ತಿಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶಕ್ಕಾಗಿ ಶುಲ್ಕ ನಿಗದಿಪಡಿಸುವುದಕ್ಕಾಗಿ 'ಶುಲ್ಕ ನಿಯಂತ್ರಣ ಸಮಿತಿ' ಎಂದು ಕರೆಯಲಾಗುವ ಸಮಿತಿಯೊಂದು ಇರತಕ್ಕದ್ದು. ಅದು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,-

| | | |
|---|---|---|
| (ಎ) | ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಂದ ನಾಮನಿರ್ದೇಶಿತರಾದ ಕರ್ನಾಟಕ ಉಚ್ಚನ್ಯಾಯಾಲಯದ ಒಬ್ಬ ನಿವೃತ್ತ ನ್ಯಾಯಾಧೀಶರು | ಅಧ್ಯಕ್ಷರು |
| (ಬಿ) | ವ್ಯಾಸಂಗಕ್ರಮಕ್ಕನುಸಾರವಾಗಿ ಸಂದರ್ಭಾನುಸಾರ | ಸದಸ್ಯ |

| | | |
|---|---|---|
| | ಭಾರತದ ವೈದ್ಯಕೀಯ ಪರಿಷತ್ತಿನ ಅಥವಾ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಒಬ್ಬ ಪ್ರತಿನಿಧಿ | |
| (ಸಿ) | ಅಧ್ಯಕ್ಷರಿಂದ ನಾಮ ನಿರ್ದೇಶಿತನಾದ ಒಬ್ಬ ಖ್ಯಾತ ವ್ಯಕ್ತಿ | ಸದಸ್ಯ |
| (ಡಿ) | ಅಧ್ಯಕ್ಷರಿಂದ ನಾಮನಿರ್ದೇಶಿತನಾದ ಒಬ್ಬ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ | ಸದಸ್ಯ |
| (ಇ) | ವ್ಯಾಸಂಗಕ್ರಮಕ್ಕನುಸಾರವಾಗಿ ಸಂದರ್ಭಾನುಸಾರ ವೈದ್ಯಕೀಯ ಶಿಕ್ಷಣ ಅಥವಾ ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ | ಸದಸ್ಯ ಕಾರ್ಯದರ್ಶಿ |

(2) ಶುಲ್ಕ ನಿಯಂತ್ರಣ ಸಮಿತಿಯು,-

(i) ಶೈಕ್ಷಣಿಕ ವರ್ಷದ ಪ್ರಾರಂಭದ ಮುಂಚಿತವಾಗಿಯೇ ಅಂದರೆ, ಹಿಂದಿನಶೈಕ್ಷಣಿಕ ವರ್ಷದ ಡಿಸೆಂಬರ್ 31 ರೊಳಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು ಮತ್ತು ಲೆಕ್ಕಪತ್ರಗಳ ಪುಸ್ತಕಗಳೊಂದಿಗೆ, ಅಂಥ ಸಂಸ್ಥೆಯ ಪ್ರಸ್ತಾವಿತ ಶುಲ್ಕ ರಚನೆಯನ್ನು ಪರಿಶೋಧನೆಗಾಗಿ ಸಮಿತಿಯ ಮುಂದೆ ಇಡಲು ಪ್ರತಿಯೊಂದು ವೃತ್ತಿ ಶಿಕ್ಷಣ ಸಂಸ್ಥೆಯನ್ನು ಅಗತ್ಯಪಡಿಸುವ;

(ii) ಪ್ರತಿಯೊಂದು ಸಂಸ್ಥೆಯು ಪ್ರಸ್ತಾವ ಸಲ್ಲಿಸಿದ ಶುಲ್ಕವು ಸಮರ್ಥನೀಯವಾಗಿದೆ ಮತ್ತು ಅದರ ಅನುಷ್ಠಾನ ಲಾಭಕೋರತನ ಆಗುವುದಿಲ್ಲ ಅಥವಾ ಕ್ಯಾಪಿಟೇಷನ್ ಶುಲ್ಕವನ್ನು ವಿಧಿಸಿದಂತೆ ಆಗುವುದಿಲ್ಲ ಎಂಬುದನ್ನು ಪರಿಶೀಲಿಸಿ ನೋಡುವ;

(iii) ಶುಲ್ಕ ರಚನೆ ಅನುಮೋದಿಸುವುದಕ್ಕೆ ಅಥವಾ ಸಂಸ್ಥೆ ವಿಧಿಸಬಹುದಾದ ಬೇರೊಂದು ಶುಲ್ಕವನ್ನು ನಿರ್ಧರಿಸುವುದಕ್ಕೆ,

– ಅಧಿಕಾರ ಹೊಂದಿರತಕ್ಕದ್ದು.

(3) ಶುಲ್ಕ ನಿಯಂತ್ರಣ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಉದ್ಭವಿಸಬಹುದಾದ ಎಲ್ಲಾ ವಿಷಯಗಳ ಬಗ್ಗೆ ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ಅದು ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯವು ದಾವೆಯ ಅಧಿವಿಚಾರಣೆ ಮಾಡುವಾಗ ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿದಾರನಿಗೆ ಸಮನುನೀಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಮತ್ತು ಅವನನ್ನು ಪ್ರಮಾಣ ವಚನದ ಮೇಲೆ ವಿಚಾರಣೆ ನಡೆಸುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕುವುದು ಮತ್ತು ಹಾಜರುಪಡಿಸುವುದು;

(ಸಿ) ಅಫಿಡಾವಿತ್ತುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರನ್ನು ವಿಚಾರಣೆ ಮಾಡುವುದಕ್ಕಾಗಿ ಯಾವುದೇ ಕಮೀಷನನ್ನು ಹೊರಡಿಸುವುದು.

(4) ಸಮಿತಿಯು ನಿರ್ಧರಿಸಿದ ಶುಲ್ಕಕ್ಕೆ ಮೂರುವರ್ಷಗಳ ಅವಧಿವರೆಗೆ ಆ ವೃತ್ತಿ ಶಿಕ್ಷಣ ಸಂಸ್ಥೆಯು

ಬದ್ಧವಾಗಿರತಕ್ಕದ್ದು. ಸದರಿ ಅವಧಿಯ ಕೊನೆಯಲ್ಲಿ ಪರಿಷ್ಕರಣೆಗಾಗಿ ಅರ್ಜಿಸಲ್ಲಿಸಲು ಆ ಸಂಸ್ಥೆಗೆ ಮುಕ್ತ ಅವಕಾಶವಿದೆ. ಹಾಗೆ ನಿರ್ಧರಿಸಲಾದ ಶುಲ್ಕವು, ಆ ಶೈಕ್ಷಣಿಕ ವರ್ಷದಲ್ಲಿ ಒಂದು ಸಂಸ್ಥೆಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾಲೇಜಿನಲ್ಲಿ ಅವನ ವ್ಯಾಸಂಗವು ಮುಕ್ತಾಯವಾಗುವವರೆಗೆ ಅದು ಪರಿಷ್ಕರಣೆಯಾಗತಕ್ಕದ್ದಲ್ಲ. ಯಾವ ವೃತ್ತಿ ಶಿಕ್ಷಣ ಸಂಸ್ಥೆಯೂ, ಅಭ್ಯರ್ಥಿಯಿಂದ ಒಂದು ವರ್ಷದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸತಕ್ಕದ್ದಲ್ಲ. ಒಂದು ವರ್ಷದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸಿದರೆ ಅದನ್ನು ಕ್ಯಾಪಿಟೇಷನ್ ಶುಲ್ಕವನ್ನು ಸಂಗ್ರಹಿಸಿದಂತೆ ಎಂಬುದಾಗಿ ಪರಿಗಣಿಸಲಾಗುವುದು ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕದ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ 37) ಅಡಿಯುಲ್ಲಿ ದಂಡ ವಿಧಿಸುವಿಕೆಗೆ ಗುರಿಯಾಗತಕ್ಕದ್ದು.

(5) ಯಾವುದೇ ಖಾಸಗಿ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಯೊಂದಿಗೆ ಸಂಬಂಧವುಳ್ಳ ಯಾವ ವ್ಯಕ್ತಿಯೂ ಶುಲ್ಕ ನಿಯಂತ್ರಣ ಸಮಿತಿಯ ಸದಸ್ಯನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(6) ನಾಮನಿರ್ದೇಶನ ಮಾಡಲು ಸಕ್ಷಮವಾದ ಪ್ರಾಧಿಕಾರದ ಇಷ್ಟಕ್ಕೆ ಒಳಪಟ್ಟು, ನಾಮನಿರ್ದೇಶಿತ ಸದಸ್ಯರ ಪದಾವಧಿಯು, ಅವರು, ನಾಮನಿರ್ದೇಶಿತರಾದ ದಿನಾಂಕದಿಂದ ಎರಡು ವರ್ಷಗಳಾಗಿರತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ, ಅದಕ್ಕಿಂತ ಮುಂಚೆಯೇ ಸ್ಥಾನವು ಖಾಲಿಯಾದ ಸಂದರ್ಭದಲ್ಲಿ ಅಂಥ ಖಾಲಿ ಸ್ಥಾನವನ್ನು ಉಳಿದ ಅವಧಿಗಾಗಿ ಭರ್ತಿ ಮಾಡತಕ್ಕದ್ದು. ಸರ್ಕಾರೇತರ ಸದಸ್ಯರು, ನಿಯಮಿಸಬಹುದಾದಂಥ ಉಪವೇಶನ ಶುಲ್ಕ ಮತ್ತು ಭತ್ಯಗಳನ್ನು ಪ್ರಯಾಣ ಪಡೆಯಲು ಅರ್ಹರಾಗಿರತಕ್ಕದ್ದು.

(7) ಶುಲ್ಕ ನಿಯಂತ್ರಣ ಸಮಿತಿಯು ಕೈಗೊಂಡ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಸಮಿತಿಯ ರಚನೆಯಲ್ಲಿ ಯಾವುದೇ ಖಾಲಿ ಸ್ಥಾನ ಇದೆ ಅಥವಾ ಯಾವುದೇ ದೋಷವಿದೆ ಎಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(8) ಶುಲ್ಕ ನಿಯಂತ್ರಣ ಸಮಿತಿಯ ಒಬ್ಬ ಸದಸ್ಯನು, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಸದಸ್ಯನಾದವನಿಗೆ ತಕ್ಕದ್ದಾಗಿರದಂಥ ಯಾವುದೇ ಕಾರ್ಯವನ್ನು ಮಾಡಿದ್ದರೆ ಆತನ ಸದಸ್ಯತ್ವವು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವೊಬ್ಬ ಸದಸ್ಯನಿಗೂ ಆತನು, ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಆತನನ್ನು ಸಮಿತಿಯಿಂದ ತೆಗೆದುಹಾಕತಕ್ಕದ್ದಲ್ಲ.

(9) ಅಧ್ಯಕ್ಷರು, ಶುಲ್ಕ ನಿಯಂತ್ರಣ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಸಮಿತಿಯು, ಅದು ತಾನು ಯುಕ್ತವೆಂದು ಭಾವಿಸಿದಂಥ ತನ್ನದೇ ಕ್ರಮಗಳನ್ನು ಅನುಸರಿಸಬಹುದು.

**7. ಶುಲ್ಕ ನಿಗದಿಗೆ ಪರಿಗಣನೆಯ ಅಂಶಗಳು.–** (1) ಶುಲ್ಕ ನಿಯಂತ್ರಣ ಸಮಿತಿಯು, ಈ ಮುಂದಿನ ಅಂಶಗಳನ್ನು ಪರಿಗಣಿಸಿ, ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಖಾಸಗಿ ಅನುದಾನಿತ ಅಥವಾ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು ವಿಧಿಸತಕ್ಕ ಶುಲ್ಕ ಅಥವಾ ಶುಲ್ಕಗಳನ್ನು ನಿಗದಿಪಡಿಸತಕ್ಕದ್ದು, ಎಂದರೆ,–

(ಎ) ವೃತ್ತಿ ಶಿಕ್ಷಣ ಸಂಸ್ಥೆಯು ಇರುವ ಸ್ಥಳ;

(ಬಿ) ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮದ ಸ್ವರೂಪ;

(ಸಿ) ದೊರೆಯಬಹುದಾದ ಮೂಲ ಸೌಕರ್ಯಗಳು;

(ಡಿ) ಆಡಳಿತದ ಮತ್ತು ನಿರ್ವಹಣೆಯ ವೆಚ್ಚ;

(ಇ) ಸಂಸ್ಥೆಯ ಬೆಳವಣಿಗೆಗೆ ಮತ್ತು ಅಭಿವೃದ್ಧಿಗಾಗಿ ಅಗತ್ಯವಿರುವ ಯುಕ್ತ ಹೆಚ್ಚುವರಿಗಳು;

(ಎಫ್) ಸಮಿತಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಇತರ ಅಂಶಗಳು.

(2) ಯಾವ ವೃತ್ತಿಶಿಕ್ಷಣ ಸಂಸ್ಥೆಯೂ, ವೃತ್ತಿಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಯಾವುದೇ ಹೆಸರಿನಿಂದ ಅಥವಾ ಯಾವುದೇ ರೂಪದಲ್ಲಿ ಯಾವುದೇ ಶುಲ್ಕವನ್ನು ಶುಲ್ಕ ನಿಯಂತ್ರಣ ಸಮಿತಿಯು ನಿಗದಿಪಡಿಸಿದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯವು ನಿಯಮಿಸಿದ ಶುಲ್ಕಕ್ಕಿಂತಲೂ ಹೆಚ್ಚುವರಿಯಾಗಿ ಸಂಗ್ರಹಿಸತಕ್ಕದ್ದಲ್ಲ.

(3) ಶುಲ್ಕ ನಿಯಂತ್ರಣ ಸಮಿತಿಯು, ವಿವಿಧ ಸಂಸ್ಥೆಗಳಲ್ಲಿ ಒದಗಿಸುತ್ತಿರುವ ವಿವಿಧ ಬಗೆಯ ವೃತ್ತಿ ವ್ಯಾಸಂಗ ಕ್ರಮಗಳ ಸಂಬಂಧದಲ್ಲಿ ಅಲ್ಲಿ ಲಭ್ಯವಿರುವ ಸೌಲಭ್ಯಗಳ ಆಧಾರದ ಮೇಲೆ ಬೇರೆ ಬೇರೆ ಶುಲ್ಕವನ್ನು ನಿಗದಿಪಡಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಅದು, ಸಮಾನ ಸ್ಥಿತಿಗತಿಯ ಸಂಸ್ಥೆಗಳನ್ನು ಸ್ಥೂಲ ಗುಂಪುಗಳಾಗಿ ಸೇರಿಸಬಹುದು:

ಪರಂತು, ಶುಲ್ಕ ನಿಯಂತ್ರಣ ಸಮಿತಿಯು, ವೃತ್ತಿ ಶಿಕ್ಷಣ ಸಂಸ್ಥೆಗಳಿಗೆ ಅನಿವಾಸಿ ಭಾರತೀಯರ ಪ್ರವೇಶಕ್ಕಾಗಿ, ಹೆಚ್ಚಿನ ಶುಲ್ಕವನ್ನು ಸಂಗ್ರಹಿಸಲು ಅವಕಾಶ ನೀಡಬಹುದಾಗಿದೆ. ರಾಜ್ಯಸರ್ಕಾರವು, ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಸಂಗ್ರಹಿಸತಕ್ಕ ಕನಿಷ್ಠ ಶುಲ್ಕವನ್ನು ನಿಗದಿಪಡಿಸಬಹುದು ಮತ್ತು ಆ ಸಂಸ್ಥೆಯಲ್ಲಿ ಇತರೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಸಂಗ್ರಹಿಸಲಾದ ಶುಲ್ಕವನ್ನು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲು ಬಳಸತಕ್ಕದ್ದು.

(4) ಯಾವುದೇ ಸಂಸ್ಥೆಯು, ಕ್ಯಾಪಿಟೇಷನ್ ಶುಲ್ಕವನ್ನು ಅಥವಾ ನಿಗದಿಪಡಿಸಲಾದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಗ್ರಹಿಸುತ್ತಿರುವುದಾಗಿ ಅಥವಾ ಲಾಭಕೋರತನದಿಂದ ಶುಲ್ಕವನ್ನು ಸಂಗ್ರಹಿಸುತ್ತಿರುವುದಾಗಿ ಯಾವುದೇ ದೂರು ಬಂದಲ್ಲಿ, ಶುಲ್ಕ ನಿಯಂತ್ರಣ ಸಮಿತಿಯು, ಸಾಕ್ಷ್ಯಗಳನ್ನು ಮತ್ತು ಸಂಬಂಧಪಟ್ಟ ಆಡಳಿತ ಮಂಡಳಿಯಿಂದ ವಿವರಣೆಗಳನ್ನು ಪಡೆದ ತರುವಾಯ, ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ಅಥವಾ ರಾಜ್ಯಸರ್ಕಾರಕ್ಕೆ ಅವಶ್ಯಕ ಕ್ರಮ ಕೈಗೊಳ್ಳುವಂತೆ ಸೂಕ್ತ ಶಿಫಾರಸ್ಸು ಕಳುಹಿಸತಕ್ಕದ್ದು. ಅಂಥ ಶಿಫಾರಸ್ಸಿನ ಮೇಲೆ, ರಾಜ್ಯ ಸರ್ಕಾರವು ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ, ಅಂಥ ವೃತ್ತಿಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಮೇಲೆ ಹತ್ತು ಲಕ್ಷ ರೂಪಾಯಿಗಳವರೆಗೆ ಜುಲ್ಮಾನೆಯನ್ನು ವಿಧಿಸುವಂತೆ ಮತ್ತು ವಸೂಲು ಮಾಡುವಂತೆ ನಿರ್ದೇಶಿಸಬಹುದು. ಮತ್ತು ಹಾಗೆ ವಿಶ್ವವಿದ್ಯಾನಿಲಯವು ಜುಲ್ಮಾನೆ ವಿಧಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ವಿಶ್ವವಿದ್ಯಾನಿಲಯವು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಅಂಥ ಸಂಸ್ಥೆಯು ನೀಡಿದ ಎಲ್ಲಾ ಅಥವಾ ಯಾವುವೇ ಪ್ರವೇಶಗಳನ್ನು ಅನುಮೋದಿಸತಕ್ಕದ್ದಲ್ಲ ಅಥವಾ ರಾಜ್ಯಸರ್ಕಾರಕ್ಕೆ ತಿಳಿಸಿ ಅಂಥ ಸಂಸ್ಥೆಗಳಿಗೆ ನೀಡಿದ್ದ ಮನ್ನಣೆ ಅಥವಾ ಸಂಯೋಜನೆಯನ್ನು ಹಿಂದಕ್ಕೆ ಪಡೆಯಬಹುದು.

**8. ಅರ್ಹತೆ.–** ಯಾವ ವಿದ್ಯಾರ್ಥಿಗೂ ಆತನು ನಿಯಮಿಸಬಹುದಾದಂಥ ವಿದ್ಯಾರ್ಹತೆಯನ್ನು ಅಥವಾ ಅದಕ್ಕೆ ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದ ಹೊರತು ವೃತ್ತಿಶಿಕ್ಷಣ ಸಂಸ್ಥೆಗಳಿಗೆ, ಪ್ರವೇಶ ನೀಡತಕ್ಕದ್ದಲ್ಲ.

**9. ಸೀಟುಗಳ ಹಂಚಿಕೆ ಮತ್ತು ಮೀಸಲಾತಿ.–** ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು ಮಂಜೂರಾದ ಸೀಟುಗಳಲ್ಲಿ,

(i) (ಎ) ಅನುದಾನಿತ ಸಂಸ್ಥೆಗಳಲ್ಲಿ, ಎಲ್ಲಾ ಸರ್ಕಾರಿ ಸೀಟುಗಳನ್ನು, ರಾಜ್ಯ ಸರ್ಕಾರದ ಮೀಸಲಾತಿ ನೀತಿಗೆ ಒಳಪಟ್ಟು 3(6)ನೇ ಪ್ರಕರಣಕ್ಕೆ ಅನುಸಾರವಾಗಿ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ಮೂಲಕ ಭರ್ತಿಮಾಡಿಕೊಳ್ಳತಕ್ಕದ್ದು; ಮತ್ತು

(ಬಿ) ಉಳಿಕೆ ಸೀಟುಗಳು ಸಾಮಾನ್ಯ ಸೀಟುಗಳಾಗಿರತಕ್ಕದ್ದು.

(ii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಿದಂತೆ ಶೇ.50 ಐವತ್ತರಷ್ಟು ಸೀಟುಗಳನ್ನು ರಾಜ್ಯದ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರತಕ್ಕದ್ದು. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರಷ್ಟು ಸೀಟುಗಳನ್ನು ಅನಿವಾಸಿ ಭಾರತೀಯ ಕೋಟಾಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳಬಹುದಾಗಿದೆ:

ಪರಂತು, ವಿದ್ಯಾರ್ಥಿಗಳು ದೊರೆಯದ ಕಾರಣಗಳಿಂದಾಗಿ, ಅನುದಾನಿತವಲ್ಲದ ಅಲ್ಪಸಂಖ್ಯಾತವಲ್ಲದ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗಾಗಿ ಮೀಸಲಿರಿಸಲಾದ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅಥವಾ ಮೀಸಲು ಪ್ರವರ್ಗದ ವಿದ್ಯಾರ್ಥಿಗಳು ತಮ್ಮ ಸೀಟುಗಳ ಆಯ್ಕೆ ಮಾಡಿಕೊಂಡ ನಂತರ ಬಿಟ್ಟುಹೋಗಿದ್ದಲ್ಲಿ, ಆ ಸೀಟುಗಳಿಗೆ, ರಾಜ್ಯದ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಅರ್ಹತಾಪಟ್ಟಿಯಿಂದ ಅದೇ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು:

ಮತ್ತು ಪರಂತು, ತದನಂತರವೂ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ, ಅಂಥ ಉಳಿದ ಸೀಟುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.

(iii) (ಎ) ಅನುದಾನಿತವಲ್ಲದ ಅಲ್ಪಸಂಖ್ಯಾತ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ, ಶೇಕಡಾ ಅರವತ್ತಾರಕ್ಕೆ ಕಡಿಮೆ ಇಲ್ಲದ ಸೀಟುಗಳನ್ನು, ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಲ್ಲಿ ಪರಸ್ಪರ ಅರ್ಹತೆಯ ಆಧಾರದ ಮೇಲೆ, ಆ ಸಂಸ್ಥೆಯು ಯಾವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದೆಯೋ ಆ ರಾಜ್ಯದೊಳಗಿನ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು; ಮತ್ತು

(ಬಿ) ಉಳಿದ ಸೀಟುಗಳು ಸಾಮಾನ್ಯ ಪ್ರವರ್ಗಕ್ಕೆ ಸೇರಿದವುಗಳಾಗಿರುತ್ತವೆ. ಸಾಮಾನ್ಯ ಪ್ರವರ್ಗದ ಸೀಟುಗಳ ಪೈಕಿ ಶೇಕಡಾ ಹದಿನೈದರ ವರೆಗೆ ಅನಿವಾಸಿ ಭಾರತೀಯರ ಕೋಟಾಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳಬಹುದು:

ಪರಂತು, ಅನುದಾನಿತವಲ್ಲದ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತ ಪ್ರವರ್ಗಕ್ಕಾಗಿ ಮೀಸಲಿಟ್ಟ ಯಾವುದೇ ಸೀಟುಗಳು ಭರ್ತಿಯಾಗದೇ ಉಳಿದಿದ್ದಲ್ಲಿ ಅಥವಾ ಸೀಟುಗಳನ್ನು ಆಯ್ಕೆ ಮಾಡಿಕೊಂಡ ನಂತರ ವಿದ್ಯಾರ್ಥಿಗಳು

ಬಿಟ್ಟುಹೋದಲ್ಲಿ, ಅವುಗಳಿಗೆ ರಾಜ್ಯಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೆರಿಟ್ ಪಟ್ಟಿಯಿಂದ ಅವೇ ಪ್ರವರ್ಗದ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳನ್ನು ಭರ್ತಿಮಾಡಿಕೊಳ್ಳತಕ್ಕದ್ದು:

ಮತ್ತು ಪರಂತು, ಅದಾದ ನಂತರವೂ ಅಂಥ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಅವುಗಳನ್ನು, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘವು ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ಮೆರಿಟ್ ಆಧಾರದ ಮೇಲೆ ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

(iv) ಅನಿವಾಸಿ ಭಾರತೀಯ ವಿದ್ಯಾರ್ಥಿಗಳಿಂದ ಭರ್ತಿಯಾಗಿರಬಹುದಾದ ಸೀಟುಗಳನ್ನು ಬಿಟ್ಟು ಮೀಸಲು ಅಥವಾ ಸಾಮಾನ್ಯ ಪ್ರವರ್ಗದ ಸೀಟುಗಳೂ ಸೇರಿದಂತೆ, ಖಾಸಗಿ ಅನುದಾನಿತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸೀಟುಗಳಿಗೆ ಪ್ರವೇಶವನ್ನು, ಪ್ರವೇಶ ಮೇಲ್ವಿಚಾರಣಾ ಸಮಿತಿಯು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ ತರುವಾಯ ಕೇಂದ್ರೀಯ ಕೌನ್ಸಿಲಿಂಗ್ ವಿಧಾನ ಅನುಸರಿಸಿ ಮೆರಿಟ್ ಆಧಾರದ ಮೇಲೆ ನೀಡತಕ್ಕದ್ದು.

**10. ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳನ್ನು ಅಸಿಂಧುಗೊಳಿಸುವುದು.–** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಯಾವುವೇ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ಯಾವುದೇ ಪ್ರವೇಶವು ಅಸಿಂಧುವಾಗತಕ್ಕದ್ದು.

**11. ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ ನಿಧಿ.–** (1) ಸಮಿತಿಯ ನಿಧಿ ಎಂದು ಕರೆಯಲಾಗುವ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಸಮಿತಿಯ (ಇದರಲ್ಲಿ ಇನ್ನು ಮುಂದೆ ಸಮಿತಿ ಎಂದು ಕರೆಯಲಾಗಿದೆ) ಒಂದು ನಿಧಿ ಇರತಕ್ಕದ್ದು.

(2) ಈ ಮುಂದಿನವುಗಳು ಆ ನಿಧಿಯ ಭಾಗವಾಗಿರತಕ್ಕದ್ದು ಅಥವಾ ಅದಕ್ಕೆ ಸಂದಾಯಮಾಡತಕ್ಕದ್ದು, ಎಂದರೆ:–

(i) ಸಾಮಾನ್ಯ ಪ್ರವೇಶಪರೀಕ್ಷೆ ನಡೆಸುವುದಕ್ಕಾಗಿ ಸಮಿತಿಯು ಸಂಗ್ರಹಿಸಿದ ಶುಲ್ಕ;

(ii) ರಾಜ್ಯ ಸರ್ಕಾರವು ನೀಡಿದ ಅನುದಾನಗಳು;

(iii) ಸಮಿತಿಯ ಸಾಲವಾಗಿ ಪಡೆದ ಮೊಬಲಗು;

(iv) ಯಾವುದೇ ಮೂಲದಿಂದ ಸಮಿತಿಯು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು.

(3) ರಾಜ್ಯ ಸರ್ಕಾರವು ಅನ್ಯಥಾ, ನಿರ್ದೇಶಿಸಿದಂತೆ ಹೊರತು ನಿಧಿಗೆ ಜಮೆಯಾದ ಎಲ್ಲ ಮೊತ್ತವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೊಡಗಿಸತಕ್ಕದ್ದು.

**12. ರಾಜ್ಯ ಸರ್ಕಾರದಿಂದ ಅನುದಾನಗಳು.–** ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂಥ ಮೊತ್ತಕ್ಕೆ ಸಮನಾದ ಮೊಬಲಗನ್ನು ಅನುದಾನವಾಗಿ ಸಮಿತಿಗೆ ನೀಡಬಹುದು.

**13. ಸಾಲಪಡೆಯಲು ಅಧಿಕಾರ.–** (1) ಸಮಿತಿಯು ಕಾಲಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಡನೆ ಮತ್ತು ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ

ಅಧಿನಿಯಮದ ಉದ್ದೇಶಕ್ಕೆ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

**14. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಸಮಿತಿಯ ನಿಧಿಯ ವರಮಾನದ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಸಮಿತಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(3) ಸಮಿತಿಯ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ರಾಜ್ಯಸರ್ಕಾರವು ಗೊತ್ತುಪಡಿಸಬಹುದಾದಂಥ ಲೆಕ್ಕಪರಿಶೋಧಕನು ಮಾಡತಕ್ಕದ್ದು.

(4) ಲೆಕ್ಕ ಪರಿಶೋಧಕನಿಗೆ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಸಮಿತಿಯ ಎಲ್ಲ ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(5) ಸಮಿತಿಯು, ಲೆಕ್ಕಪರಿಶೋಧನೆಗೆ ನಿಯಮಿಸಬಹುದಾದಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಸಮಿತಿಯು, ಲೆಕ್ಕಪರಿಶೋಧಕನಿಂದ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರದ ಒಂದು ಪ್ರತಿಯನ್ನು ಲೆಕ್ಕ ಪರಿಶೋಧಕನ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪತ್ರವು ಪ್ರಕಟವಾಗುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ, ಸಮಿತಿಗೆ ತಾನು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಸಮಿತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**15. ಸಮಿತಿಯ ಆಯವ್ಯಯ ಪತ್ರ.–** ಸಮಿತಿಯು, ಪ್ರತಿ ವರ್ಷ ಮುಂಬರುವ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ವರಮಾನ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಮತ್ತು ಅಂಥ ನಮೂನೆಯಲ್ಲಿ ಸಿದ್ದಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**16. ವರದಿ.–** ಸಮಿತಿಯು, ನಿಯಮಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಅಂಥ ನಮೂನೆಯಲ್ಲಿ ಅಂಥ ಅಂತರದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮಿಸಲಾದ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಅಂಥ ವರದಿಯ ಪ್ರತಿಯನ್ನು ಮಂಡಿಸುವಂತೆ ಮಾಡತಕ್ಕದ್ದು.

**17. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯದ ಬಗ್ಗೆ ಯಾವೊಬ್ಬ ಸರ್ಕಾರದ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್‌ನನ್ನು ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**18. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರಲ್ಲಿ ಇರುವ ಯಾವುವೇ ಉಪಬಂಧಗಳನ್ನು ಅಥವಾ

ಅದರಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದೇಶನ ನೀಡುವುದು ಅವಶ್ಯವೆಂದು ಅಥವಾ ಉಚಿತವೆಂದು ಅಭಿಪ್ರಾಯಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಸಂದರ್ಭಾನುಸಾರ ಅಂಥ ಸಂಸ್ಥೆಯ ಆಡಳಿತ ಪರಿಷತ್ತು ಅಥವಾ ಆಡಳಿತ ಮಂಡಳಿ ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

(2) ರಾಜ್ಯಸರ್ಕಾರವು, ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಗಳಿಗೆ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ತನ್ನ ಅಭಿಪ್ರಾಯದಲ್ಲಿ ಅವಶ್ಯಕ ಅಥವಾ ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಸಹ ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಅಂಥ ಅಧಿಕಾರಿಯ ಅಥವಾ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**19. ದಂಡಗಳು.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ದಂಡನೆಯನ್ನು ಇತರೆ ಯಾವುದೇ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದಂಡನೆಗೆ ಬಾಧಕವಾಗದಂತೆ ವಿಧಿಸಬಹುದು.

**20. ಪ್ರವೇಶಿಸುವ ಮತ್ತು ಪರಿಶೋಧಿಸುವ ಅಧಿಕಾರ.–** ಈ ಉದ್ದೇಶಕ್ಕಾಗಿ, ರಾಜ್ಯಸರ್ಕಾರದಿಂದ ಅಧಿಕೃತಗೊಂಡ 'ಬಿ' ಸಮೂಹದ ಅಧಿಕಾರಿ ದರ್ಜೆಗಿಂತ ಕಡಿಮೆಇಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ 37ನೇ ಅಧಿನಿಯಮ) ಅಡಿಯಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂಥವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತನಾದ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

**21. ಇತರ ಕಾನೂನುಗಳ ಮೇಲೆ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**22. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

**23. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವಪ್ರಕಟಣೆ ನೀಡಿದ ತರುವಾಯ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ನಿಯಮಗಳು, ಅವುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದರೆ ದಂಡನೆಯಾಗಿ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ವಿಧಿಸಲು ಸಹ ಉಪಬಂಧಿಸಬಹುದು. ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದಲ್ಲಿ ಅದು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

**24. ತಾತ್ಕಾಲಿಕ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ಹಾಗೂ ಯಾವ ವಿಷಯಗಳ ಪುರೋಭಿವೃದ್ಧಿಗಾಗಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಅಥವಾ ಉಪಬಂಧ ಕಲ್ಪಿಸಲಾಗಿದೆಯೋ ಅದಕ್ಕೆ ಸಂಬಂಧಪಟ್ಟ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ ಸಂಖ್ಯೆ 37) ಅಡಿಯಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ರಚಿಸಿದ ಅಥವಾ ಹೊರಡಿಸಿದ ಯಾವುದೇ ನಿಯಮ, ಅಧಿಸೂಚನೆ ಅಥವಾ ನೇಮಕಾತಿಗಳು ಅವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಅಥವಾ ತೆಗೆದುಕೊಂಡ ಯಾವುದೇ ಕ್ರಮದಿಂದ ಅಥವಾ ಯಾವುದೇ ನಿಯಮ, ಅಧಿಸೂಚನೆ ಅಥವಾ ನೇಮಕಾತಿಯಿಂದ ರದ್ದಾದ ಹೊರತು ಮತ್ತು ರದ್ದಾಗುವವರೆಗೆ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವ ಮಟ್ಟಿಗೆ, ಅವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದ್ದರೆ ಅಥವಾ ಹೊರಡಿಸಿದ್ದರೆ ಅಥವಾ ನೇಮಿಸಿದ್ದರೆ, ಹೇಗೋ ಹಾಗೆ ಜಾರಿಯಲ್ಲಿ ಮುಂದುವರಿಯುತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು.

सत्यमेव जयते

* * * *

## Karnataka Act No. 8 of 2006

## THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND DETERMINATION OF FEE) ACT, 2006

### Arrangement Sections

Sections:

1. Short title and commencement
2. Definitions
3. State Common Entrance Test Committee
4. Method of admission in unaided professional educational institutions
5. Admission Overseeing Committee
6. Fee Regulatory Committee
7. Factors for Determination of Fee
8. Eligibility
9. Allocation and reservation of seats
10. Invalidation of admissions made in violation of the Act
11. Fund of the State Common Entrance Test Committee
12. Grants by the State Government
13. Power to borrow
14. Accounts and audit
15. Budget of the Committee
16. Report
17. Protection of action taken in good faith
18. Power of State Government to issue directions
19. Penalties
20. Power to enter and inspect
21. Act to override other laws
22. Power to remove difficulties
23. Power to make rules
24. Transitory provisions

* * * *

## STATEMENT OF OBJECTS AND REASONS

It is considered necessary to provide for regulation of admission and determination of fee in professional educational institutions in the State of Karnataka and to provide for reservation of seats to persons belonging to the Scheduled Castes, the Scheduled Tribes and Other Backward Classes in professional educational institutions.

The Hon'ble Supreme Court in its judgement in Islamic Academy of Education and others Vs State of Karnataka, reported in (2003) 6 SCC 697, sought to regulate admissions to professional courses through two committees, one for overseeing admissions and the other for approving the fee structure in professional educational institutions, pending enactment of appropriate law by the Parliament.

The Supreme Court in P.A.Inamdar and Others Vs State of Maharashtra reported in (2005) 6 SCC 537 has held that where there is more than one minority or non minority institution or similarly situated institution in the State imparting education in any one discipline then a single common entrance test followed by centralised counseling, or in other words, single window system of admission is necessary in order to achieve the twin objectives of transparency and merit. All institutions of the same or similar type, whether minority or non minority institutions will therefore be required to fill their seats through a single common entrance test followed by centralised counseling.

Further the Apex Court in the same judgement has held that the State can regulate admission by providing a centralized and single window procedure which will ensure fair and merit based admissions and prevent maladministration. If the admission procedure followed by the private institutions fails to satisfy all or any of the triple tests prescribed by the Court, the admission procedure can be taken over by the State substituting its own procedure. It is also pointed out that minority institutions will lose their minority character if there is more than a "sprinkling" of students from non-minority communities in these institutions. The Apex Court has also clarified that the minority students should be from within the State. Taking this into consideration the Bill provides for sixty six percent of reservation in minority institutions for students from that community within the State.

Whereas the population of the Scheduled Castes, Scheduled Tribes and Other Backward Classes exceeds fifty percent of the total population in the State. The Hon'ble Supreme Court in Indirasawhany Vs. Union of India reported in AIR 1993 SC 477 has held that the reservations made for all categories shall not exceed fifty percent. Keeping this in mind the State Government has issued orders providing reservation for the Scheduled Castes, the Scheduled Tribes and Other Backward Classes to the extent of fifty percent under article 15(4) of the Constitution.

Article 15 (5) of the Constitution (as inserted by the Constitution (Ninety-third

Amendment) Act, 2005 provided for making any special provision by law by the State Government for advancement of any socially and educationally backward classes of citizen or for the Scheduled Castes or the Scheduled Tribes in relation to admission to education institution including private educational institutions whether aided or unaided, other than minority educational institutions notwithstanding anything contained in article 15 and sub-clause (g) of article 19 of the Constitution.

Based on the above policy it is considered necessary to provide for reservation for the Scheduled Castes, the Scheduled Tribes and Other Backward Classes who are socially and educationally backward to the extent of fifty percent in Government, aided and unaided non-minority professional educational institutions.

Hence the Bill.

[L.A. Bill No. 1 of 2006]

* * * *

## Karnataka Act No. 8 of 2006

*(First published in the Karnataka Gazette Extra-ordinary on the twenty fifth day of April, 2006)*

# THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND DETERMINATION OF FEE) ACT, 2006

*(Received the assent of the Governor on the twenty fourth day of April, 2006)*

**An Act to provide for regulation of admission and determination of fee in professional educational institutions in the State of Karnataka and to provide for reservation of seats to persons belonging to the Scheduled Castes, the Scheduled Tribes and Other Backward Classes in the seats in professional educational institutions.**

Whereas the Hon'ble Supreme Court in its judgement in Islamic Academy of Education and others Vs State of Karnataka, reported in (2003) 6 SCC 697, sought to regulate admissions to professional courses through two committees, one for overseeing admissions and the other for approving the fee structure in professional educational institutions, pending enactment of appropriate lay by the Parliament.

And whereas the Supreme Court in P.A. Inamdar and Others Vs State of Maharashtra reported in (2005) 6 SCC 537 has held that where there is more than one minority or non minority institution or similarly situated institution in the State imparting education in any one discipline then a single common entrance test followed by centralised counseling, or in other words, single window system of admission is necessary in order to achieve the twin objectives of transparency and merit. All institutions of the same or similar type, whether minority or non minority institutions will therefore be required to fill their seats through a single common entrance test followed by centralised counseling.

Further the Apex Court in the same judgement has held that the State can regulate admission by providing a centralized and single window procedure which will ensure fair and merit based admissions and prevent maladministration. If the admission procedure followed by the private institutions fails to satisfy all or any of the triple tests prescribed by the Court, the admission procedure can be taken over by the State substituting its own procedure.

And whereas, in the Constitution (Ninety-third Amendment) Act, 2005, a provision has been made under article 15(5) as follows:-

"(5) Nothing in this article or in sub-clause (g) of clause (1) of article 19 shall prevent the State from making any special provision, by law, for the advancement of any socially and educationally backward classes of citizens or for the Scheduled Castes or

the Scheduled Tribes in so far as such special provisions relate to their admission to educational institutions including private educational institutions, whether aided or unaided by the State, other than the minority educational institutions referred to in clause (1) of article 30."

In order to achieve the above object and for the purposes hereinafter appearing it is considered necessary and expedient to provide for the following:

Be it enacted by the Karnataka State Legislature in the fifty-seventh year of the Republic of India, as follows:-

**1. Short title and commencement.-** (1) This Act may be called the Karnataka Professional Educational Institutions (Regulation of Admission and Determination of Fee) Act, 2006.

(2) It shall come into force on such date as the State Government may, by notification, appoint.

**2. Definitions.-** (1) In this Act, unless the context otherwise requires,-

(a) "Admission" means admission made at the admission centre;

(b) "Admission Centre" means the centre at which selection and allotment of seats to the candidates to various courses in professional institutions are made through the Common Entrance Test based on merit.

(c) "Admission Overseeing Committee" means the committee constituted by the State Government under section 5 for regulating the admissions in private unaided professional educational institutions;

(d) "Aided institution" means a private professional educational institution receiving financial aid or grant-in-aid from the State Government and includes minority and non-minority educational institutions receiving such financial aid or grant;

(e) "Common Entrance Test" means the entrance test conducted for determination of merit of the candidates followed by centralized counseling for the purpose of admission to professional educational courses through a single window procedure;

(f) "Common Entrance Test Cell" means the agency of the State Government which conducts the common entrance test;

(g) "Fee Regulatory Committee" means the Committee constituted under section 6 for determination and regulation of fee for admission to private unaided professional educational institutions;

(h) "Government" means the State Government;

(i) "Government seats" means all the seats in Government colleges,

university constituent colleges, such number of the seats in Private Aided Professional Educational Institutions as may be notified by State Government and such number of the seats in unaided minority and non-minority professional educational institutions as may be notified by the State Government in accordance with the consensus arrived at between the private professional educational institutions and the State Government;

(j) "General Category Seats" means the seats other than the reserved seats;

(k) "Intake" means and implies the total number of seats sanctioned by the competent authority for admitting students in each course of study in a professional educational institution;

(l) "Minority" means and includes religious and linguistic minority as may be notified by the State Government;

(m) "Minority educational institution" means the education institutions recognized or notified as such by the State Government subject to such conditions as may be prescribed;

(n) "Non-resident Indian" means a candidate born to a parent of Indian origin and residing outside the country and who has passed the qualifying equivalent examination outside India;

(o) "Other Backward Classes" means class or classes of citizens who are socially and educationally backward as may be notified by the State Government;

(p) "Professional Educational Courses" means,-

(I) In Medical and Dental Institutions, the first year of,-

(i) Bachelor of Medicine and Bachelor of Surgery and

(ii) Bachelor of Dental Surgery

(II) In the Indian Systems of Medicine and Homoeopathy Institutions, the first year of,-

(i) Bachelor of Ayurvedic Medicine and Surgery

(ii) Bachelor of Unani Medicine and Surgery

(iii) Bachelor of Naturopathy and Yoga and

(iv) Bachelor of Homoeopathic Medicine and Surgery

(III) In Engineering Institutions, the first year, first semester and in respect of diploma holders, the second year, third semester (in the case of Architecture course first year, first Semester) of both full-time and part-time courses in,-

(i) Bachelor of Engineering

(ii) Bachelor of Technology; and

(iii) Bachelor of Architecture

and includes any other professional educational courses at undergraduate and postgraduate levels as well as super speciality courses as may be notified by the State Government in this behalf;

(q) "Professional Educational Institution" means college or school or an institute by whatever name called imparting professional education or conducting professional educational courses leading to the award of a degree, diploma or a certificate by whatever name called, approved or recognized by the competent statutory body and affiliated to an university;

(r) "Qualifying examination" means the examination as may be prescribed;

(s) "Reserved seats" means the seats reserved in Government colleges, constituent colleges of universities, private aided and unaided professional educational institutions in favour of persons belonging to the Scheduled Castes, the Scheduled Tribes and Other Backward Classes as may be notified by the State Government;

(t) "State Common Entrance Test Committee" means the Committee constituted under section 3 which conducts the common entrance test and makes admissions to the Government seats in professional colleges; and

(u) "Unaided institution" means any privately managed professional educational institution, which is not receiving aid or grant-in-aid from the State Government.

(2) The words and expressions used but not defined shall have the same meaning assigned to them as in the Karnataka Educational Institutions (Prohibition of Capitation Fee) Act, 1984 (Karnataka Act 37 of 1984) and in any other law for the time being in force.

**3. State Common Entrance Test Committee.-** (1) There shall be a State Common Entrance Test Committee consisting of,-

(a) Vice Chancellor of either Rajiv Gandhi University of Health Sciences or Vishveshwaraiah Technological University, nominated by the State Government : Chairperson

(b) Director of Medical Education : Member

(c) Director of Technical Education : Member

(d) Director of Indian Systems of Medicine and Homoeopathy : Member

(e) Three persons to be nominated by the Chairperson from among the Principals of aided or unaided colleges: : Members

(i) One from medical colleges

(ii) One from dental colleges

(iii) One from engineering colleges

(f) Special Officer, Common Entrance Test Cell : Member-Secretary

Provided that, in case all private unaided Professional Educational Institutions agree and opt to fill all of their seats except the seats reserved for non-resident Indian students through State Common Entrance Test Cell, then the State Government may, by notification, re-constitute the State Common Entrance Test Committee consisting of such number of members, as it deems fit, including representatives from the management of private unaided Professional Educational institutions imparting education in Medical, Dental, Engineering and other faculties.

(2) The Committee shall conduct a Common Entrance Test for admission of students to the Government seats in professional educational institutions. For the purpose of ensuring this the State Government shall provide such number of officers and officials to the State Common Entrance Test Committee as may be required.

(3) The Chairperson shall preside over the meeting and the committee shall adopt such procedure as it deem fit.

(4) The Committee shall have such powers and shall discharge such functions and conduct the examination in such manner as may be prescribed.

